# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಜೂನ್ 7, 2021

ಸಂಪುಟ : 48 ಸಂಚಿಕೆ : 24 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


## ಹೈಕಮಾಂಡ್ ಸೂಚಿಸಿದ ತಕ್ಷಣವೇ ರಾಜೀನಾಮೆ

ಬೆಂಗಳೂರು, ಜೂ. 6 – ಹೈಕಮಾಂಡ್ ಸೂಚಿಸಿದ ತಕ್ಷಣ ರಾಜೀನಾಮೆ ನೀಡುತ್ತೇನೆ ಎಂದು ಹೇಳಿರುವ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ, ರಾಜ್ಯದಲ್ಲಿ ಪರ್ಯಾಯ ನಾಯಕರು ಇರುತ್ತಾರೆ ಎಂದಿದ್ದಾರೆ.



**ಬಿಎಸ್‌ವೈ ಹೇಳಿಕೆಯಿಂದ ರಾಜ್ಯದಲ್ಲಿ ರಾಜಕೀಯ ಬಿರುಗಾಳಿ**

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಬಿಜೆಪಿ ಹೈಕಮಾಂಡ್ ನನ್ನ ಮೇಲೆ ಸಂಪೂರ್ಣ ವಿಶ್ವಾಸವಿಟ್ಟಿದೆ. ಎಲ್ಲಿಯವರೆಗೆ ಅಧಿಕಾರದಲ್ಲಿ ಇರುವಂತೆ ಹೇಳುತ್ತಾರೋ ಅಲ್ಲಿಯವರೆಗೂ ನಾನು ಅಧಿಕಾರದಲ್ಲಿ ಮುಂದುವರೆಯುತ್ತೇನೆ. ಹೈಕಮಾಂಡ್ ರಾಜೀನಾಮೆ ನೀಡುವಂತೆ ಸೂಚಿಸಿದರೆ ತಕ್ಷಣ ರಾಜೀನಾಮೆ ನೀಡುತ್ತೇನೆ ಎಂದಿದ್ದಾರೆ.

ರಾಜೀನಾಮೆ ನೀಡಿ ರಾಜ್ಯದ ಅಭಿವೃದ್ಧಿಗೆ ಕೆಲಸ ಮಾಡುತ್ತೇನೆ. ಆದರೆ, ಬಿಜೆಪಿ ಹೈಕಮಾಂಡ್ ನನ್ನ ಮೇಲೆ ವಿಶ್ವಾಸ ಇಟ್ಟಿದೆ. ಪರ್ಯಾಯ ನಾಯಕ ಇಲ್ಲವೆಂಬ ಮಾತನ್ನು ನಾನು ಒಪ್ಪುವುದಿಲ್ಲ. ರಾಜ್ಯದಲ್ಲಿ ಪರ್ಯಾಯ ನಾಯಕರು ಇರುತ್ತಾರೆ ಎಂದವರು ಹೇಳಿದ್ದಾರೆ. ಕೆಲ ಸಚಿವರಿಂದ ನಾಯತ್ವ ಬದಲಾವಣೆ ವಿಷಯಕ್ಕೆ ಸಂಬಂಧಿಸಿದಂತೆ (2ನೇ ಪುಟಕ್ಕೆ)

## ಬಿಎಸ್‌ವೈ ಹೇಳಿಕೆ ಹಿಂದೆ ತಂತ್ರಗಾರಿಕೆ

**ಬೆಂಗಳೂರು, ಜೂ. 6 – ರಾಜೀನಾಮೆ ಕುರಿತು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ರಾಜೀನಾಮೆ ಹಿಂದೆ ಬೇರೆಯದೇ ತಂತ್ರಗಾರಿಕೆ ಇದೆ ಎಂದು ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಅಂದಾಜಿಸಿದ್ದಾರೆ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಯಡಿಯೂರಪ್ಪ ಗಟ್ಟಿ ಮನುಷ್ಯ. ಅಷ್ಟು ಸಲೀಸಾಗಿ ಜಗ್ಗಲ್ಲ ಎಂದಿದ್ದಾರೆ. ಅವರ ಹೇಳಿಕೆಯನ್ನು 2-3 ರೀತಿಯಲ್ಲಿ ವಿಶ್ಲೇಷಿಸಬಹುದು. ನನ್ನನ್ನು ಮುಟ್ಟಿ ನೋಡಿ ಎಂಬ ಎಚ್ಚರಿಕೆ ಇರಬ ಹುದು. ನಾನು ಶಿಸ್ತಿನ ಸಿಪಾಯಿ ಎಂದೂ ಇರಬಹುದು. ನೀವು ಹೇಗೆ ವಿಶ್ಲೇಷಣೆಮಾಡುತ್ತೀರೋ** (2ನೇ ಪುಟಕ್ಕೆ)



## 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡಲು ಸಿದ್ಧ





ದಾವಣಗೆರೆ, ಜು.6- ಸರ್ಕಾರ 18ರಿಂದ 45 ವರುಷದ ಒಳಗಿನವರಿಗೆ ಲಸಿಕೆ ನೀಡಲು ಒಪ್ಪಿದರೆ ನಾವೂ ಸಹ ಉಚಿತವಾಗಿ ಲಸಿಕೆ ನೀಡಲು ಸಿದ್ದವಿರುವುದಾಗಿ ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ಈಗಾಗಲೇ ದಾವಣಗೆರೆ ಜನತೆಗೆ ಉಚಿತವಾಗಿ ಕೋವಿಶೀಲ್ಡ್ ಲಸಿಕೆ ನೀಡುತ್ತಿದ್ದು, ಸರ್ಕಾರದ (2ನೇ ಪುಟಕ್ಕೆ)

## ಸುಸ್ಥಿರ ಅಭಿವೃದ್ಧಿಯಲ್ಲಿ ಭಾರತದ ಕುಸಿತ

ನವದೆಹಲಿ, ಜೂ. 6 – ಸುಸ್ಥಿರ ಅಭಿವೃದ್ಧಿ ಗುರಿ (ಎಸ್.ಡಿ.ಜಿ.) ಸೂಚ್ಯಂಕದಲ್ಲಿ ಭಾರತ ಕಳೆದ ವರ್ಷಕ್ಕೆ ಹೋಲಿಸಿದರೆ ಎರಡು ಸ್ಥಾನಗಳ ಕುಸಿತ ಕಂಡಿದ್ದು, 117ರ ಹಂತಕ್ಕೆ ಬಂದಿದೆ. ಎಂದು ವಿಶ್ವ ಸಂಸ್ಥೆ ತನ್ನ ಇತ್ತೀಚಿನ ವರದಿಯಲ್ಲಿ ತಿಳಿಸಿದೆ.

ಕಳೆದ ವರ್ಷ ಭಾರತ 115ನೇ ಸ್ಥಾನದಲ್ಲಿತ್ತು. ಆದರೆ, ನಂತರ ಎರಡು ಸ್ಥಾನಗಳ ಕುಸಿತ ಕಂಡಿದೆ ಎಂದು ದಿ ಸ್ಟೇಟ್ ಆಫ್ ಇಂಡಿಯಾಸ್ ಎನ್ವಿರಾನ್‌ಮೆಂಟ್ (2ನೇ ಪುಟಕ್ಕೆ)


SSLC ವಿದ್ಯಾರ್ಥಿಗಳ ಗಮನಕ್ಕೆ

PUC Science ಓದಬೇಕೆಂದಿದ್ದರೆ ಈ ಮಾಹಿತಿ ನಿಮಗಾಗಿ



SIDDAGANGA PU SCIENCE COLLEGE

PCMB / PCMC



NEET / JEE / KCET / KVPY

ADMISSION OPEN FOR I PUC

BRIDGE COURSE-2021

ಹೆಚ್ಚಿನ ಮಾಹಿತಿಗಾಗಿ

Call : 8073301604 | 08192-233635

Scan QR Code

Siddalingeshwara Nagara
Davanagere-577002
visit : www.siddaganga.com



Srishyla Educational Trust (R), Bheemasamudra

GM INSTITUTE OF TECHNOLOGY, DAVANGERE

Affiliated to Visvesvaraya Technological University, Belagavi & Approved by AICTE, New Delhi and Govt. of Karnataka.

Post Box No. 4, P. B. Road, Davangere - 577 006, Karnataka, INDIA




Record Placements in Entire Middle Karnataka Region

- ISO 9001-2015 and NAAC Accredited Institution
- Accredited by NBA for the programes CSE, ECE, Civil & Mech
- Awarded as Gold Rating Institution in AICTE-CII survey of Industry linked Technical institutes 2017-18, 2018-19, 2019-20
- 80 Mous with top Industries
- More than 300+ drives and 1800+ offers from past 5 years
- Tie up with more than 6+ Training Institutes to make our students industry Ready

460+ CURRENT FINAL YEAR STUDENTS PLACED IN TOP COMPANIES

Targeting towards 500 +

Placement Process is in Progress

| Infosys | Accenture | SLK Software Serveces | TCS | HCL | VRK Design Landform | Schnider Electric | Focus Edumatics |
|---|---|---|---|---|---|---|---|
| 14+ Placed | 14+ Placed | 13 Placed | 9 Placed | 40 Placed | 11 Placed | 38 Placed | 69 Placed |

..... and so on

COURSES OFFERED KEA/CET Options

B.E

AI & ML - Artificial Intelligence & Machine Learning
CSE - Computer Science and Engg.
ISE - Information Science and Engg.
ECE - Electronics & Communication Engg.
ME - Mechanical Engg.
CE - Civil Engg.
BT - Biotechnology
R&A - Robotics & Automation (Awaiting AICTE approval)
EEE - Electrical & Electronics Engg (Awaiting AICTE approval)

MBA
(Mktg, Fin, HRM)
(Dual Specialization)

DIPLOMA
Mechanical Engineering
Civil Engineering

Our Recruiters:-

Infosys IBM BOSCH HUAWEI BYJU'S codilar ATEES D-Mart MPS cadence Mainlec ICICI Bank RAMCO Robosoft YoungStone NTT Data GADMAXX kotak Cargill careerPrime

Placements for the Year 2020-2021 are Still in Progress & Many More Companies are lined-up

GMIT Congratulates all the Placed Students GMIT Known for Quality - Education & Placements

Contact for Admission:
63642 59993 / 63642 59992
Toll Free: 1800 3132 880

# ಕಾಂಗ್ರೆಸ್‌ನಿಂದ ಆನ್‌ಲೈನ್ ಚಿಕಿತ್ಸೆ : ಪ್ರಕಾಶ್ ಕೋಳಿವಾಡ

ರಾಣೇಬೆನ್ನೂರು, ಜೂ.6- ಕೋವಿಡ್ ಎರಡನೇ ಅಲೆ ನಗರಕ್ಕಿಂತ ಗ್ರಾಮೀಣ ಭಾಗದಲ್ಲಿ ಅತೀ ಹೆಚ್ಚು ಹರಡುತ್ತಿದ್ದು, ಅಲ್ಲಿನ ಕಾಂಗ್ರೆಸ್ ಕಾರ್ಯಕರ್ತರು ಶ್ರಮವಹಿಸಿ ಕೋವಿಡ್ ವಿರುದ್ಧ ಹೋರಾಟ ನಡೆಸಿದ್ದಾರೆ ಎಂದು ಕೆಪಿಸಿಸಿ ಕಾರ್ಯದರ್ಶಿ ಪ್ರಕಾಶ್ ಕೋಳಿವಾಡ ಹೇಳಿದರು.

ಇಂದಿಲ್ಲಿ ಜೂಮ್ ಸಭೆ ನಡೆಸಿದ ನಂತರ ತಮ್ಮನ್ನು ಭೇಟಿಯಾದ ಪತ್ರಕರ್ತರ ಜೊತೆ ಅವರು ಮಾತನಾಡಿದರು.

ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇಲ್ಲದ ತಾಲ್ಲೂಕಿನ 42 ಗ್ರಾಮ ಗಳಲ್ಲಿ ಆನ್‌ಲೈನ್ ಚಿಕಿತ್ಸೆ ಪ್ರಾರಂಭಿಸಲಾಗಿದೆ. ಉಳಿದಂತೆ 23 ಗ್ರಾಮ ಗಳಲ್ಲಿ ನಾಳೆಯಿಂದ ಚಿಕಿತ್ಸೆ ಪ್ರಾರಂಭಿಸಲಾಗುತ್ತಿದ್ದು, ಒಟ್ಟು 65 ಗ್ರಾಮಗಳ ಜನರಿಗೆ ಈ ಸೌಲಭ್ಯ ದೊರೆಯಲಿದೆ ಎಂದು ಪ್ರಕಾಶ್ ಹೇಳಿದರು.

ತುಮ್ಮಿನಕಟ್ಟೆ, ಮೆಡ್ಲೇರಿ, ಕುಪ್ಪೇಲೂರು, ಅರೆಮಲ್ಲಾಪುರ, ಹಲಗೇರಿ, ಚಳಗೇರಿ ಮುಂತಾದ 6 ಗ್ರಾಮಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 6 ಕಾನ್ಸಂಟ್ರೇಟರ್‌ಗಳನ್ನು ಅಳವಡಿಸಿದ್ದು,




ನಗರದ ಆಸ್ಪತ್ರೆಗೆ ತೆರಳುವವರೆಗೆ ಆಕ್ಸಿಜನ್ ನೀಡಿ ಗ್ರಾಮೀಣ ಜನರ ಜೀವ ರಕ್ಷಿಸಲು ಈ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಪ್ರಕಾಶ್ ಕೋಳಿವಾಡ ವಿವರಿಸಿದರು. ಜನರ ಜೀವ ರಕ್ಷಣೆಗಾಗಿ ಕಾಂಗ್ರೆಸ್ ಪ್ರಯತ್ನ ನಡೆಸಿದೆ. ಆದರೆ, ಕೋವಿಡ್ ಬರದಂತೆ ತಡೆ ಯುವ ಕೆಲಸ ಸರ್ಕಾರದಿಂದ ಮಾತ್ರ ಸಾಧ್ಯ. ಕಾರಣ ಕೇಂದ್ರ, ರಾಜ್ಯ ಸರ್ಕಾರಗಳು ರಾಜಕಾರಣ ಮಾಡದೇ ಜನ ರನ್ನು ರಕ್ಷಿಸಲು ಲಸಿಕೆ ಕೊಡಬೇಕಿದೆ. ಸಚಿವರು, ಶಾಸಕರು ಆ ದಿಶೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿ ಲಸಿಕೆ ತರಬೇಕು ಎಂದು ಹೇಳಿದರು.

ಪಿಕೆಕೆ ಸೇವಾ ಸಂಸ್ಥೆಯಿಂದ ನಗರದ ಆಸ್ಪತ್ರೆ ಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸೋಂಕಿತರಿಗೆ ಹಾಗೂ ಅವರ ಆರೈಕೆಗೆ ಬಂದಿರುವವರಿಗೆಲ್ಲ ಬಿಸಿ ಊಟ ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದು, ಕೋವಿಡ್ ಸಂಪೂರ್ಣ ನಾಶವಾಗುವ ವರೆಗೆ ಈ ವ್ಯವಸ್ಥೆ ಮುಂದುವರೆಸಲಾಗುವುದು ಎಂದು ಪ್ರಕಾಶ್ ಕೋಳಿವಾಡ ಹೇಳಿದರು.

### ಎಸ್ಸೆಸ್‌ರಿಂದ ಪುಣ್ಯದ ಕಾರ್ಯ

ದಾವಣಗೆರೆಯ ದಣಿ ಶಾಮನೂರು ಶಿವಶಂಕರಪ್ಪ ಅವರು ಸ್ವಂತ ಹಣದಲ್ಲಿ ದಾವಣಗೆರೆಯ ಎರಡೂ ವಿಧಾನಸಭಾ ಕ್ಷೇತ್ರಗಳ ಜನರಿಗೆ ಲಸಿಕೆ ಹಾಕಿಸುತ್ತಿರುವುದು ಪುಣ್ಯದ ಕೆಲಸ. ಬಹಳಷ್ಟು ಶ್ರಮವಹಿಸಿ ಲಸಿಕೆ ತರಿಸಿದ್ದಾರೆ. ಅವರಷ್ಟು ಪರಿಶ್ರಮ ಇತರರಿಗೆ ಬರಲಾರದು ಎಂದು ಪ್ರಕಾಶ್ ಹೇಳಿದರು.

### ಶಾಸನ ಮರೆತ ಶಾಸಕರು !

ಸರ್ಕಾರ ಅಥವಾ ಜನಪ್ರತಿನಿಧಿಗಳ ತಪ್ಪುಗಳ ಬಗ್ಗೆ ಮಾತನಾಡಲು ಸಾಮಾನ್ಯ ಪ್ರಜೆಗೂ ಹಕ್ಕಿದೆ. ಅದರಂತೆ ನಗರದ ಕುಡುಪಲಿ ವಕೀಲರು ಮಾತನಾಡಿದ್ದಾರೆ. ಅವರ ಮಾತುಗಳಿಂದ ನೋವಾಗಿದ್ದರೆ ನ್ಯಾಯಾಲಯದ ಮುಖಾಂತರ ನ್ಯಾಯ ಪಡೆಯಬಹುದಿತ್ತು.

ನಮ್ಮ ಶಾಸಕರು ತಮ್ಮ ಬೆಂಬಲಿಗರೊಂದಿಗೆ ಅವರ ಮನೆಗೆ ಹೋಗಿ ಗಲಾಟೆ ಮಾಡಿರುವುದು ಖಂಡನೀಯ. ಶಾಸನ ಮಾಡುವ ಶಾಸಕರೇ ಈ ರೀತಿ ಮಾಡಿರುವುದು ಅಗೌರವ ತರುವಂಥದ್ದು ಎಂದು ಪ್ರಕಾಶ್ ಹೇಳಿದರು.

# ಶಿಕ್ಷಣ ಸಾಧನೆಯಲ್ಲಿ ಐದು ರಾಜ್ಯ, ಕೇಂದ್ರಾಡಳಿತಗಳು ಮುಂಚೂಣಿ

ನವದೆಹಲಿ ಜೂ. 6 – ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ರೂಪಿಸಿರುವ ಪಿ.ಜಿ.ಐ. ಸಾಧನೆ ಅಳೆಯುವ ಸೂಚ್ಯಂಕದಲ್ಲಿ ಪಂಜಾಬ್, ಚಂಡೀಘಡ, ತಮಿಳುನಾಡು, ಅಂಡಮಾನ್ ಮತ್ತು ನಿಕೋಬಾರ್ ಹಾಗೂ ಕೇರಳಗಳು ಉನ್ನತ ಸ್ಥಾನಗಳನ್ನು ಪಡೆದುಕೊಂಡಿವೆ.

70 ಮಾನದಂಡಗಳನ್ನು ಒಳಗೊಂಡು ರೂಪಿಸಲಾದ ಸೂಚ್ಯಂಕದಲ್ಲಿ ಈ ರಾಜ್ಯಗಳು ಎ++ ಮಾನದಂಡ ಪಡೆದುಕೊಂಡಿವೆ. ದೆಹಲಿ, ಗುಜರಾತ್, ಹರಿಯಾಣ, ರಾಜಸ್ತಾನ, ಪುದುಚೆರಿ, ದಾದ್ರಾ ಮತ್ತು ನಗರ್ ಹವೇಲಿಗಳು ಎ+ ವರ್ಗದಲ್ಲಿವೆ.

ಕರ್ನಾಟಕವು ಈ ಸೂಚ್ಯಂಕದಲ್ಲಿ ಎ ಹಂತ ಪಡೆದುಕೊಂಡಿದೆ. ಆಂಧ್ರ ಪ್ರದೇಶ, ಪಶ್ಚಿಮ ಬಂಗಾಳ, ಹಿಮಾಚಲ ಪ್ರದೇಶ, ಒಡಿಶಾ, ತ್ರಿಪುರ, ಉತ್ತರ ಪ್ರದೇಶ ಹಾಗೂ ಡಿಯು ಮತ್ತು ಡಮನ್‌ಗಳೂ ಎ ಹಂತದಲ್ಲಿವೆ.

ಬಿಹಾರ ಮತ್ತು ಮೇಘಾಲಯಗಳು ಮೂಲಭೂತ ಸೌಲಭ್ಯಗಳ ವಿಷಯದಲ್ಲಿ ಕೊನೆಯ ಸ್ಥಾನದಲ್ಲಿವೆ.

ಶಿಕ್ಷಕರು, ಪ್ರಾಂಶುಪಾಲರು ಹಾಗೂ ಆಡಳಿತಾತ್ಮಕ ಸಿಬ್ಬಂದಿಯ ಕೊರತೆ ಇದೆ ಎಂಬುದು ಸಾಮಾನ್ಯ ತಿಳುವಳಿಕೆಯಾಗಿದೆ.

ಇದರ ಜೊತೆಗೆ ಶಿಕ್ಷಕರಿಗೆ ಸಮರ್ಪಕ ತರಬೇತಿಯ ಕೊರತೆ, ಸಮಯಕ್ಕೆ ಸರಿಯಾಗಿ ಹಣಕಾಸು ಲಭ್ಯತೆಯ ವಿಷಯಗಳು ದೇಶಾದ್ಯಂತ ವ್ಯಾಪಕವಾಗಿ ಕಾಡುತ್ತಿವೆ ಎಂದು ವರದಿಯಲ್ಲಿ ಹೇಳಲಾಗಿದೆ.

# 9.27 ಲಕ್ಷ ಮಕ್ಕಳಲ್ಲಿ ತೀವ್ರ ಅಪೌಷ್ಠಿಕತೆ



ನವದೆಹಲಿ, ಜೂ. 6 – ದೇಶದಲ್ಲಿ 9.27 ಲಕ್ಷ ಮಕ್ಕಳು ತೀವ್ರ ಅಪೌಷ್ಠಿಕತೆಯಿಂದ ಬಳಲುತ್ತಿದ್ದಾರೆ. ಉತ್ತರ ಪ್ರದೇಶ ಹಾಗೂ ಬಿಹಾರಗಳಲ್ಲಿ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚಾಗಿದೆ ಎಂದು ಸರ್ಕಾರಿ ಅಂಕಿ ಅಂಶಗಳು ತಿಳಿಸಿವೆ.

ಕಳೆದ ವರ್ಷ ನವೆಂಬರ್‌ನ ಅಂಕಿ-ಅಂಶಗಳ ಪ್ರಕಾರ ಆರು ತಿಂಗಳಿನಿಂದ ಆರು ವರ್ಷದವರೆಗಿನ ಮಕ್ಕಳಲ್ಲಿ 9.27 ಲಕ್ಷ ಮಕ್ಕಳು ತೀವ್ರ ಅಪೌಷ್ಠಿಕತೆಯಿಂದ ಬಳಲುತ್ತಿದ್ದಾರೆ ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಮಾಹಿತಿ ಹಕ್ಕು ಅರ್ಜಿಯೊಂದಕ್ಕೆ ತಿಳಿಸಲಾಗಿದೆ.

ಉತ್ತರ ಪ್ರದೇಶದಲ್ಲಿ 3.98 ಲಕ್ಷ ಹಾಗೂ ಬಿಹಾರದಲ್ಲಿ 2.79 ಲಕ್ಷ ಮಕ್ಕಳು ಅಪೌಷ್ಠಿಕತೆಯಿಂದ ಬಳಲುತ್ತಿದ್ದಾರೆ ಎಂದು ಸಚಿವಾಲಯ ತಿಳಿಸಿದೆ.

ಮತ್ತೊಂದೆಡೆ ಲಡಾಖ್, ಲಕ್ಷದ್ವೀಪ, ನಾಗಾಲ್ಯಾಂಡ್, ಮಣಿಪುರ ಹಾಗೂ ಮಧ್ಯ ಪ್ರದೇಶಗಳಲ್ಲಿ ತೀವ್ರ ಅಪೌಷ್ಠಿಕತೆಯಿಂದ ಬಳಲುತ್ತಿರುವ ಯಾವುದೇ ಮಗು ಇಲ್ಲ ಎಂದು ತಿಳಿಸಲಾಗಿದೆ.

ಕೊರೊನಾ ಪರಿಸ್ಥಿತಿಯ ಕಾರಣದಿಂದಾಗಿ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿರಬಹುದು ಎಂಬ ಕಳವಳ ವ್ಯಕ್ತವಾಗುತ್ತಿದೆ.

ಆರ್ಥಿಕ ಬಿಕ್ಕಟ್ಟಿನ ಕಾರಣದಿಂದಾಗಿ ನಿರುದ್ಯೋಗ ಹೆಚ್ಚಾಗುತ್ತಿದೆ. ಇದು ಹಸಿವು ಹಾಗೂ ಅಪೌಷ್ಠಿಕತೆ ಹೆಚ್ಚಿಸಬಹುದು. ಇದನ್ನು ತಪ್ಪಿಸಲು ಸರ್ಕಾರ ಕ್ರಮಗಳನ್ನು ತೆಗೆದುಕೊಳ್ಳ ಬೇಕಿದೆ ಎಂದು ಮಕ್ಕಳ ಹಕ್ಕು ಸಂಘಟನೆಯಾದ ಹೆಚ್.ಎಕ್ಯೂ. ಸೆಂಟರ್ ಫಾರ್ ಚೈಲ್ಡ್ ರೈಟ್ಸ್ ಸಹ ಸ್ಥಾಪಕ ಏನಾಕ್ಷಿ ಗಂಗೂಲಿ ಹೇಳಿದ್ದಾರೆ.

ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ದಾಖಲೆಗಳ ಪ್ರಕಾರ, ಕರ್ನಾಟಕದಲ್ಲಿ ತೀವ್ರ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ 6,899 ಆಗಿದೆ. ಮಹಾರಾಷ್ಟ್ರದಲ್ಲಿ ಇಂತಹ ಮಕ್ಕಳ ಸಂಖ್ಯೆ 70 ಸಾವಿರದಷ್ಟಿದೆ.

# ಮರ ಬೆಳೆಸದಿದ್ದರೆ ಶುದ್ಧ ಗಾಳಿಗೆ ಹಣ ನೀಡಬೇಕಾಗುತ್ತದೆ

### ಹಾಲಿವಾಣ : ಪರಿಸರ ದಿನಾಚರಣೆಯಲ್ಲಿ ಧರ್ಮಸ್ಥಳ ಯೋಜನೆಯ ತಾ|| ಯೋಜನಾಧಿಕಾರಿ ಗಣಪತಿ ಮಾಳಂಜಿ

ಮಲೇಬೆನ್ನೂರು, ಜೂ.6- ಮನುಷ್ಯನಿಗೆ ಅತ್ಯಂತ ಅವಶ್ಯಕವಾಗಿರುವ ಆಮ್ಲಜನಕವನ್ನು ನೀಡುವ ಗಿಡ - ಮರಗಳನ್ನು ಕಡಿದು ಹಾಕಿ, ಈಗ ಶುದ್ಧ ಗಾಳಿಗಾಗಿ ಹಣ ಕೊಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಹರಿಹರ ತಾಲ್ಲೂಕು ಯೋಜನಾಧಿಕಾರಿ ಗಣಪತಿ ಮಾಳಂಜಿ ಬೇಸರ ವ್ಯಕ್ತಪಡಿಸಿದರು.

ಹಾಲಿವಾಣ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಎಸ್‌ಡಿಎಂಸಿ ಅವರ ಸಂಯುಕ್ತಾಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡಿದ್ದ ಸಸಿ ನೆಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.



ಗಿಡ - ಮರಗಳಿದ್ದರೆ ಉತ್ತಮ ಮಳೆಯ ಜೊತೆಗೆ ವಾತಾವರಣವೂ ಸುಂದರವಾಗಿರುತ್ತದೆ. ಮಳೆಯಾದರೆ ರೈತರ ಬೆಳೆಗಳು ಸಮೃದ್ಧಿಯಾಗಿರುತ್ತವೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು.

ಈ ನಿಟ್ಟಿನಲ್ಲಿ ಪ್ರತಿ ನಗರ, ಪಟ್ಟಣ, ಹಳ್ಳಿಗಳಲ್ಲಿ ಪ್ರತಿಯೊಬ್ಬರೂ ಸಸಿ ನೆಟ್ಟು ಬೆಳೆಸುವ ಕೆಲಸ ಮಾಡಲು ಈ ದಿನ ಪ್ರತಿಜ್ಞೆ ಮಾಡೋಣ ಎಂದು ಗಣಪತಿ ಮಾಳಂಜಿ ಮನವಿ ಮಾಡಿದರು.

ಮಕ್ಕಳಲ್ಲೂ ಪರಿಸರದ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ಮನೆಯಲ್ಲಿ ಮತ್ತು ಶಾಲೆಯಲ್ಲಿ ಆಗಬೇಕೆಂದು ಗ್ರಾ.ಪಂ. ಅಧ್ಯಕ್ಷ ಐ.ಪಿ.ರಂಗನಾಥ್ ಹೇಳಿದರು.

ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ದೊಡ್ಡ ವೀರಾಚಾರ್ ಅಧ್ಯಕ್ಷತೆ ವಹಿಸಿದ್ದ, ಶಾಲಾ ಮುಖ್ಯ ಶಿಕ್ಷಕ ಎಸ್.ಹೆಚ್.ಹೂಗಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಗ್ರಾ.ಪಂ. ಸದಸ್ಯರಾದ ಕೆ.ಪಿ.ಮೋಹನ್, ಗೌಡ್ರ ಹನುಮಂತಪ್ಪ, ಎಸ್‌ಡಿಎಂಸಿಗಳ ಜಿಲ್ಲಾ ಸಮನ್ವಯ ವೇದಿಕೆ ಅಧ್ಯಕ್ಷ ಶಿವಪ್ಪ ಆಂಜನೇಯ, ನಿವೃತ್ತ ಎಓ ಬಸವರಾಜಪ್ಪ ಮತ್ತು ಯೋಜನೆಯ ಮೇಲ್ವಿಚಾರಕ ಶ್ರೀನಿವಾಸ್ ಮತ್ತಿತರರು ಭಾಗವಹಿಸಿದ್ದರು.

# ಹರಪನಹಳ್ಳಿ ಶಾಸಕರು ಕೋವಿಡ್ ನಿಯಂತ್ರಣದಲ್ಲಿ ವಿಫಲ



ಹರಪನಹಳ್ಳಿ, ಜೂ.6- ಕೋವಿಡ್ ಸೋಂಕಿತರ ಸಂಖ್ಯೆ ಹರಪನಹಳ್ಳಿಯಲ್ಲಿ ದಿನದಿಂದ ದಿನಕ್ಕೆ ಏರಿಕೆ ಆಗುತ್ತಲೇ ಇದೆ. ದಾವಣಗೆರೆ, ಬಳ್ಳಾರಿ, ಚಿತ್ರದುರ್ಗ ಸೇರಿದಂತೆ, ಅಕ್ಕಪಕ್ಕದ ಜಿಲ್ಲೆಗಳ ಅನೇಕ ಶಾಸಕರು ತಮ್ಮ ವಿಧಾನಸಭಾ ಕ್ಷೇತ್ರಗಳಲ್ಲಿ ಮೊಕ್ಕಾಂ ಹೂಡಿ, ಜನಸೇವೆ ಮಾಡುತ್ತಿದ್ದಾರೆ. ಕೊರೊನಾ ಸರಪಳಿ ನಿಯಂತ್ರಿಸಲು ಹಗಲು-ರಾತ್ರಿ ಶ್ರಮಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಎಂ.ಟಿ. ಸುಭಾಷ್‌ಚಂದ್ರ ಹೇಳಿದ್ದಾರೆ.

ಆದರೆ, ಹರಪನಹಳ್ಳಿ ಶಾಸಕರು ಮಾತ್ರ ಕೋವಿಡ್ ನಿಯಂತ್ರಣದ ಬಗ್ಗೆ ಗಮನವೇ ಹರಿಸುತ್ತಿಲ್ಲ. ಅವರ ಪಕ್ಷದ ಹೊನ್ನಾಳಿ, ಜಗಳೂರಿನ ಶಾಸಕರು ಸ್ವತಃ ಕೋವಿಡ್ ಕೇರ್ ಸೆಂಟರ್, ಚಿಕಿತ್ಸಾ ಕೇಂದ್ರಗಳಿಗೆ ಭೇಟಿ ಕೊಟ್ಟು, ಕುಂದು - ಕೊರತೆ ಆಲಿಸುತ್ತಿರುವುದು ಶ್ಲಾಘನೀಯ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಹರಪನಹಳ್ಳಿ ತಾಲ್ಲೂಕಿನ 134 ಹಳ್ಳಿಗಳಲ್ಲಿ ವ್ಯಾಪಿಸಿರುವ ಕೊರೊನಾ ಸೋಂಕು ಅನೇಕರನ್ನು ಬಲಿ ತೆಗೆದುಕೊಂಡಿದೆ. ಚಿಕಿತ್ಸೆ ಸಿಗದೇ ಎಷ್ಟೋ ಜನರು ದೂರದ ನಗರಗಳಿಗೆ ಆಸ್ಪತ್ರೆಗಾಗಿ ಪರದಾಡುವ ಸ್ಥಿತಿಯಿದೆ. ಶಾಸಕರು ಕಾಣೆಯಾಗಿದ್ದಾರೆ ಎನ್ನುವ ಅನುಮಾನ ಕಾಡುತ್ತಿದೆ ಎಂದು ಸುಭಾಷ್ ವ್ಯಂಗ್ಯವಾಡಿದ್ದಾರೆ.

ಸಾರ್ವಜನಿಕ ಆಸ್ಪತ್ರೆಗಳಲ್ಲಿ ಅಗತ್ಯ ಸಿಬ್ಬಂದಿಗಳಿಲ್ಲ, ಕೊರೊನಾ ಸಮಯದಲ್ಲಿ ನೇಮಕ ಮಾಡಿಕೊಂಡಿರುವ ಸಿಬ್ಬಂದಿಗಳಿಗೆ ವಿಶೇಷ ವೇತನವಿಲ್ಲವಾಗಿದೆ. ವೈದ್ಯರ ಕೊರತೆಯಿಂದ ವಿವಿಧ ಹಳ್ಳಿಯ ಆರೋಗ್ಯ ಕೇಂದ್ರಗಳಲ್ಲಿ ರೋಗಿಗಳು ಪರದಾಡುವಂತಾಗಿದೆ.

ಹರಪನಹಳ್ಳಿ ಆಸ್ಪತ್ರೆಗೆ ಹೆಚ್ಚುವರಿ ವೈದ್ಯರನ್ನು ನೇಮಿಸಬೇಕಾದ ಶಾಸಕರು, ಕ್ಷೇತ್ರದಿಂದ, ಜನರಿಂದ ದೂರವಿರುವುದು ತರವಲ್ಲ. ತಕ್ಷಣವೇ ತಾಲ್ಲೂಕಿಗೆ ಭೇಟಿ ಕೊಟ್ಟು, ಜನರ ಕುಂದುಕೊರತೆ ಆಲಿಸಬೇಕು. ಆಯ್ಕೆ ಮಾಡಿದ ಕ್ಷೇತ್ರದ ಜನರ ಆರೋಗ್ಯ ರಕ್ಷಣೆಗೆ ಕಟಿಬದ್ಧರಾಗಿ ನಿಲ್ಲಬೇಕು ಎಂದು ಅವರು ಒತ್ತಾಯಿಸಿದ್ದಾರೆ.

# ಹೈಕಮಾಂಡ್ ಸೂಚಿಸಿದ ತಕ್ಷಣವೇ ರಾಜೀನಾಮೆ

**(1ನೇ ಪುಟದಿಂದ)** ನೀಡಲಾಗುತ್ತಿರುವ ಹೇಳಿಕೆಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು, ನಾನು ಯಾರ ಬಗ್ಗೆಯೂ ಟೀಕೆ ಟಿಪ್ಪಣಿ ಮಾಡುವುದಿಲ್ಲ. ನನ್ನ ಮೇಲೆ ಹೈಕಮಾಂಡ್‌ಗೆ ವಿಶ್ವಾಸ ಇರುವವರೆಗೆ ಇರುತ್ತೇನೆ. ನಾನು ಯಾವುದೇ ಗೊಂದಲದಲ್ಲಿ ಇಲ್ಲ ಎಂದಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಗೃಹ ಸಚಿವ ಬಸವರಾಜ ಬೊಮ್ಮಾಯಿ, ರಾಜ್ಯದಲ್ಲಿನ ಇತ್ತೀಚಿನ ರಾಜಕೀಯ ಬೆಳವಣಿಗೆಗಳ ಬಗ್ಗೆ ಯಡಿಯೂರಪ್ಪ ಅವರಿಗೆ ತುಂಬಾ ಬೇಸರ ಇದ್ದಂತಿದೆ. ಅವರ ಜೊತೆ ಮಾತನಾಡುವಾಗ ನೋವು ಗೊತ್ತಾಯಿತು. ಅವರ ಮಾತುಗಳಲ್ಲಿ ಬೇಸರ ಇತ್ತು ಎಂದಿದ್ದಾರೆ.

ನಮ್ಮ ಮುಖ್ಯಮಂತ್ರಿ ಅಭಿವೃದ್ಧಿ ಕೆಲಸಗಳ ಜೊತೆ ಕೊರೊನಾ ನಿಯಂತ್ರಣಕ್ಕೂ ಕೆಲಸ ಮಾಡುತ್ತಿದ್ದಾರೆ. ಆದರೆ, ನಾಯಕತ್ವದ ಬದಲಾವಣೆಯ ಗಾಳಿ ಸುದ್ದಿ ಹಬ್ಬಿಸಲಾಗುತ್ತಿದೆ. ಹೈಕಮಾಂಡ್ ಕೂಡ ಯಡಿಯೂರಪ್ಪ ಸಾಮರ್ಥ್ಯವನ್ನು ಗುರುತಿಸಿದೆ ಎಂದರು.

ಯಡಿಯೂರಪ್ಪ ನೇತೃತ್ವದಲ್ಲಿ ರಾಜ್ಯದಲ್ಲಿ ನಡೆದ ಚುನಾವಣೆಗಳಲ್ಲಿ ಪಕ್ಷಕ್ಕೆ ಸಂಪೂರ್ಣ ಬೆಂಬಲ ಸಿಕ್ಕಿದೆ. ಕೊರೊನಾ ಸಂಕಷ್ಟದ ಈ ಸಂದರ್ಭದಲ್ಲಿ ಅವರು ನಿರಂತರವಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ, ಅಪಸ್ವರ ಎತ್ತಿರುವವರು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದೂ ಅವರು ಹೇಳಿದ್ದಾರೆ.

### ಹಿಂದೆ ತಂತ್ರಗಾರಿಕೆ

**(1ನೇ ಪುಟದಿಂದ) ಮಾಡಿ ಎಂದರು. ರಾಜ್ಯ ಹಾಗೂ ಬಿಜೆಪಿ ರಾಜಕಾರಣದಲ್ಲಿ ಯಡಿಯೂರಪ್ಪ ಗಟ್ಟಿ ನಾಯಕ. ಅವರ ನಾಯಕತ್ವದಲ್ಲಿ ಚುನಾವಣೆ ನಡೆದಿದೆ. ಅವರ ನಾಯಕತ್ವದಲ್ಲೇ ನಮ್ಮ ಪಕ್ಷದ ಸ್ನೇಹಿತರನ್ನು ಕರೆದುಕೊಂಡು ಹೋಗಿ ಬಿಜೆಪಿ ಸರ್ಕಾರ ಮಾಡಿದ್ದಾರೆ ಎಂದೂ ಅವರು ಹೇಳಿದ್ದಾರೆ.**

ಯಡಿಯೂರಪ್ಪ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿರುವ ಕಂದಾಯ ಸಚಿವ ಆರ್. ಅಶೋಕ್, ಅವರ ಮನಸ್ಸಿಗೆ ನೋವು ಆದಂತೆ ಕಾಣುತ್ತಿದೆ. ಹೀಗಾಗಿ ಅವರು ಹೈಕಮಾಂಡ್ ಹೇಳಿದರೆ ರಾಜೀನಾಮೆ ನೀಡುತ್ತೇನೆ ಎಂದು ಹೇಳಿರಬಹುದು. ಆದರೆ, ರಾಜ್ಯದಲ್ಲಿ ನಾಯಕತ್ವದ ಬದಲಾವಣೆ ಪ್ರಶ್ನೆಯೇ ಇಲ್ಲ ಎಂದರು.

ರಾಜ್ಯದಲ್ಲಿ ಕೆಲವು ದಿನಗಳಿಂದ ನಡೆಯುತ್ತಿರುವ ರಾಜಕೀಯ ವಿದ್ಯಮಾನ, ದೆಹಲಿ ಪ್ರಯಾಣ, ಮುಂದೆ ನಾವೇ ಮುಖ್ಯಮಂತ್ರಿ ಹೀಗೆ ಈ ರೀತಿ ಪದೇ ಪದೇ ಸುದ್ದಿ, ನಾಯಕತ್ವದ ಪ್ರಶ್ನೆಯ ವಿಷಯ ಬಿಂಬಿತ ಆಗಿರುವುದನ್ನು ನೋಡಿ ಅವರ ಮನಸ್ಸಿಗೆ ನೋವಾದಂತಿದೆ ಎಂದವರು ಹೇಳಿದ್ದಾರೆ.

ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ಕೊಡುತ್ತೇನೆ ಎಂಬ ಯಡಿಯೂರಪ್ಪ ಹೇಳಿಕೆ ಸ್ವಾಗತಿಸುವುದಾಗಿ ಬಿಜೆಪಿಯ ಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ಹೇಳಿದ್ದಾರೆ.

ಬಿಜೆಪಿಯಲ್ಲಿ ವಯಸ್ಸಿನ ಲಕ್ಷ್ಮಣ ರೇಖೆ ಇದೆ. 75 ವರ್ಷ ದಾಟಿದವರಿಗೆ ಯಾವುದೇ ಹುದ್ದೆ ಬೇಡ ಎಂಬ ನಿಯಮ ಇದೆ. ಯಡಿಯೂರಪ್ಪ ಅವರಿಗೆ ವಿನಾಯಿತಿ ಕೊಟ್ಟಿದ್ದರು. ಆದರೆ, ವಯಸ್ಸು, ಆರೋಗ್ಯ ಎಲ್ಲವೂ ಆಡಳಿತದ ಮೇಲೆ ಪರಿಣಾಮ ಬೀರುತ್ತಿದೆ ಎಂಬ ಮನವರಿಕೆ ಅವರಿಗೆ ಆಗಿದೆ. ಆರ್.ಎಸ್.ಎಸ್. ಕೂಡ ಅವರ ಮನವೊಲಿಸಿರಬಹುದು ಎಂದು ವಿಶ್ವನಾಥ್ ಹೇಳಿದ್ದಾರೆ.

# ನೂರ್‌ಜಹಾನ್ ಮಾವಿಗೆ 1,000 ರೂ. ಬೆಲೆ !

ಇಂದೋರ್, ಜೂ. 6 – ಮಧ್ಯ ಪ್ರದೇಶದ ಅಲಿರಾಜಪುರದಲ್ಲಿ ಬೆಳೆಯಲಾಗಿರುವ 'ನೂರ್‌ಜಹಾನ್' ಮಾವಿನ ಹಣ್ಣಿಗೆ ಈಗ 1,000 ರೂ.ಗಳವರೆಗೆ ಬೆಲೆ ಸಿಗುತ್ತಿರುವುದು ಗಮನ ಸೆಳೆದಿದೆ.



ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ನೂರ್‌ಜಹಾನ್ ಮಾವಿನ ಹಣ್ಣಿನ ಇಳುವರಿಯೂ ಹೆಚ್ಚಾಗಿದೆ. ಪ್ರತಿ ಒಂದು ಮಾವಿನ ಹಣ್ಣಿನ ಬೆಲೆ 500 ರೂ.ಗಳಿಂದ 1,000 ರೂ.ಗಳಾಗಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ. ನೂರ್‌ಜಹಾನ್ ಮಾವಿನ ತಳಿ ಆಫ್ಘಾನ್ ಮೂಲದ್ದು. ಇದನ್ನು ಅಲಿರಾಜಪುರದ ಕತ್ಥಿವಾಡ ಪ್ರಾಂತ್ಯದಲ್ಲಿ ಮಾತರ್ ನಲ್ಲಿ ಬೆಳೆಯಲಾಗುತ್ತದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ನನ್ನ ತೋಟದಲ್ಲಿರುವ ಮೂರು ಮಾವಿನ ಹಣ್ಣಿನ ಮರಳಿಂದ 250 ಮಾವಿನ ಹಣ್ಣುಗಳು ದೊರೆತಿವೆ. ಪ್ರತಿ ಮಾವಿನ ಹಣ್ಣಿಗೆ 500 ರೂ.ಗಳಿಂದ 1,000 ರೂ. ದೊರೆತಿದೆ. ಈಗಾಗಲೇ ಮಾವಿಗೆ ಬುಕಿಂಗ್ ಆರಂಭವಾಗಿದೆ ಎಂದು ಕತ್ಥಿವಾಡದ ಮಾವು ಬೆಳೆಗಾರ ಶಿವರಾಜ್ ಸಿಂಗ್ ಜಾಧವ್ ಹೇಳಿದ್ದಾರೆ. ಪ್ರತಿಯೊಂದು ಮಾವಿನ ಹಣ್ಣಿನ ತೂಕ 2 ರಿಂದ 3.5 ಕೆಜಿಯಷ್ಟಿದೆ.

### ಮೇಲ್ಪಟ್ಟವರಿಗೆ ಲಸಿಕೆ ನೀಡಲು ಸಿದ್ದ

**(1ನೇ ಪುಟದಿಂದ)** ಸೂಚನೆಯಂತೆ 45 ವರುಷದ ಮೇಲ್ಪಟ್ಟವರಿಗೆ ಮಾತ್ರ ನೀಡಲಾಗುತ್ತಿದೆ. ಲಸಿಕೆ ಪಡೆದ ಎಲ್ಲರೂ ಆರೋಗ್ಯವಾಗಿದ್ದಾರೆ ಎಂದರು.

18 ರಿಂದ 45 ವರುಷದ ಒಳಗಿನವರಿಗೆ ಲಸಿಕೆ ನೀಡುವಂತೆ ಬೇಡಿಕೆ ಇದೆ. ಲಸಿಕೆ ನೀಡದಂತೆ ಸರ್ಕಾರ ನಿರ್ಬಂಧ ಹೇರಿದ್ದು, ಇದನ್ನು ತೆರವುಗೊಳಿಸಿದರೆ ನಾವು ಲಸಿಕೆ ನೀಡುತ್ತೇವೆ ಎಂದು ತಿಳಿಸಿದ್ದಾರೆ. ಯುವ ಜನತೆ ದೇಶ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಲಿದ್ದು, ಇದನ್ನು ದೃಷ್ಠಿಯಲ್ಲಿಟ್ಟು ಕೊಂಡು ಸರ್ಕಾರ ಲಸಿಕೆ ನೀಡಲು ಅನುಮತಿ ನೀಡಬೇಕು ಎಂದಿದ್ದಾರೆ.

### ಸುಸ್ಥಿರ ಅಭಿವೃದ್ಧಿಯಲ್ಲಿ ಕುಸಿತ

**(1ನೇ ಪುಟದಿಂದ)** ರಿಪೋರ್ಟ್‌ನಲ್ಲಿ ಹೇಳಲಾಗಿದೆ. ಹಸಿವು ನಿವಾರಣೆ, ಲಿಂಗ ಸಮಾನತೆ ಹಾಗೂ ಸುಸ್ಥಿರ ಮೂಲಭೂತ ಸೌಲಭ್ಯಗಳ ಸ್ಥಾಪನೆ, ಸರ್ವರನ್ನೂ ಒಳಗೊಂಡ ಬೆಳವಣಿಗೆ ಮತ್ತಿತರೆ ವಿಷಯಗಳೂ ಸೇರಿದಂತೆ 17 ವಿಷಯಗಳನ್ನು ಆಧರಿಸಿ ಸೂಚ್ಯಂಕ ರೂಪಿಸಲಾಗಿದೆ. ದಕ್ಷಿಣ ಏಷಿಯಾದ ದೇಶಗಳಾದ ಭೂತಾನ್, ನೇಪಾಳ, ಶ್ರೀಲಂಕಾ ಹಾಗೂ ಬಾಂಗ್ಲಾದೇಶಗಳಿಗಿಂತ ಭಾರತ ಹಿಂದೆ ಬಿದ್ದಿದೆ. ಎಸ್.ಡಿ.ಜಿ. ಒಟ್ಟು 100 ಅಂಕಗಳಲ್ಲಿ ಭಾರತ 61.9 ಅಂಕ ಗಳಿಸಿದೆ. ಭಾರತದ ರಾಜ್ಯಗಳ ನಡುವೆಯೂ ಸ್ಥಾನಮಾನಗಳಲ್ಲಿ ಸಾಕಷ್ಟು ಅಂತರವಿದೆ. ಜಾರ್ಖಂಡ್ ಹಾಗೂ ಬಿಹಾರಗಳು ಎಸ್.ಡಿ.ಜಿ. ಸೂಚ್ಯಂಕದಲ್ಲಿ ಕೊನೆಯ ಸ್ಥಾನಗಳಲ್ಲಿವೆ. ಕೇರಳ, ಹಿಮಾಚಲ ಪ್ರದೇಶ ಹಾಗೂ ಕೇರಳಗಳು ಎಸ್.ಡಿ.ಜಿ. ಸೂಚ್ಯಂಕದಲ್ಲಿ ಮುಂಚೂಣಿಯಲ್ಲಿವೆ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗ ದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟ್‌ಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಲೇಔಟ್‌ನಲ್ಲಿ, ಡಾಲರ್ಸ್ ಕಾಲೋನಿಯಲ್ಲಿ 40x70 West, 60 ಅಡಿ ರೋಡಿಗಿದೆ, 30x40 West , 40 ಅಡಿ ರೋಡಿಗಿದೆ, 30x48 East, 30x50 West, 40x60 North
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಶಿವಗಂಗಾ ಎಂಟರ್‌ಪ್ರೈಸಸ್**
ನಮ್ಮಲ್ಲಿ ವಾಟರ್‌ಪ್ಯೂರಿಫೈಯರ್ ಮತ್ತು ಸೋಲಾರ್ ವಾಟರ್‌ಹೀಟರ್ ಸರ್ವೀಸ್ ಮಾಡಲಾಗುತ್ತದೆ.
ಸಂಪರ್ಕಿಸಿ : 90668 50888

ಅನ್ನವೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಇಂದಿನ ಅನ್ನದಾಸೋಹ ದಾಸೋಹಿಗಳು
ಶ್ರೀಮತಿ ಶ್ರೀದೇವಿ ಬಿ.ಸಿ. ವೀರಣ್ಣ
ಶ್ರೀಮತಿ ಗಾಯಿತ್ರಿ ಬಾಳಿಗ
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್,
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ಶ್ರೀ ಅಮೃತ್ ಇವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಕರ್ನಾಟಕ ಗೃಹ ಮಂಡಳಿಯಲ್ಲಿ ಮನೆಗಳು, ಸೈಟ್‌ಗಳು ಮಾರಾಟಕ್ಕಿವೆ**
30x44 North 33 ಲಕ್ಷಕ್ಕೆ ಮನೆ, 30x40 North ಸೈಟ್, 30x40 South ಸೈಟ್, 30x50 West ಸೈಟ್,, 30x50 North, 40x60 East, 30x50 West, 60 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟಾ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ. ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ಸುಬ್ರಮಣಿ ಆಗ್ರೋಟೆಕ್
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
94484 39639, 63665 96479

**ಭದ್ರಾ ನ್ಯಾಚುರಲ್ಸ್**
ಮೆಡ್ ಪ್ಲಸ್ ಎದುರು, ರಾಂ ಅಂಡ್ ಕೋ ಸರ್ಕಲ್ ಹತ್ತಿರ ದಾವಣಗೆರೆ.
ಆಯುರ್ವೇದಿಕ್ ಔಷಧಗಳು
ರೋಗ ನಿರೋಧಕ ಶಕ್ತಿವೃದ್ಧಿಯ ಪೋಷಕಾಂಶಗಳು, ಮನೆ ಮದ್ದುಗಳು ಒಂದೇ ಸೂರಿನಡಿ
ಸಂಪರ್ಕಿಸಿ: ಮೆಳ್ಳೇಕಟ್ಟೆ ಬಸವರಾಜ್ ಬಿ.ಎಸ್ಸಿ (ಅಗ್ರಿ)
94483 23796
76761 38170

**ಮನೆ ಮಾರಾಟಕ್ಕೆ**
15x35 ಅಳತೆಯ RCC ಮನೆ ಶ್ರೀ ರೇಣುಕಾ ನಿಲಯ ವಸಂತ ರೋಡ್, ಓಲ್ಡ್ ಅಂಡರ್ ಬ್ರಿಡ್ಜ್ ಸರ್ಕಲ್ ಎದುರು ಮನೆ ಮಾರಾಟಕ್ಕಿದೆ.
ಸಂಪರ್ಕಿಸಿ:
97316 41241
97318 40555

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆಯಲ್ಲಿ 30×50 ಪಶ್ಚಿಮ, 30×40 ಪಶ್ಚಿಮ, ಶಿವಪಾರ್ವತಿ ಬಡಾವಣೆಯಲ್ಲಿ 30×50 ಪೂರ್ವ, 30×50 ಪಶ್ಚಿಮ, ಬಾಟಲಿ ಬಿಲ್ಡಿಂಗ್ ಹಿಂಭಾಗ, 40×60 ಪಶ್ಚಿಮ-ಉತ್ತರ ಕಾರ್ನರ್
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**Wholesale Price**
Oximeter, Sanitizer, Spirometer, Vaporizer, Thermometer, variety N95 Original Mask, Face shield, Sodium, All covid 19 Related products available in wholesale Price.
Contact : 80882 10419

**ಡಾ|| ಸೋಮಶೇಖರ್. ಎಸ್.ಎ.**
Rheumatologist ಇವರು
ದಿ. 10.06.2020ರ ಗುರುವಾರ ಮತ್ತು 11.06.2021ರ ಶುಕ್ರವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292



### ನದಾಫ್/ಪಿಂಜಾರ್ ಸಂಘದ ಅಧ್ಯಕ್ಷ ಅನ್ವರ್ ಹುಸೇನ್ ನಿಧನ

ಕರ್ನಾಟಕ ರಾಜ್ಯ ನದಾಫ್/ಪಿಂಜಾರ್ ಸಂಘದ ದಾವಣಗೆರೆ ಘಟಕದ ಅಧ್ಯಕ್ಷರೂ, ಆರೋಗ್ಯ ಇಲಾಖೆಯ ನಿವೃತ್ತ ನೌಕರರೂ ಆಗಿದ್ದ ಜನಾಬ್ **ಎ.ಆರ್.ಅನ್ವರ್ ಹುಸೇನ್** ಅವರು ದಿನಾಂಕ 6-6-2021ರ ಭಾನುವಾರ ಮುಂಜಾನೆ ನಿಧನರಾದರು. ಮೃತರಿಗೆ ಸುಮಾರು 67 ವರ್ಷ ವಯಸ್ಸಾಗಿತ್ತು. ನಗರ ಆಶ್ರಯ ಸಮಿತಿಯ ಮಾಜಿ ಅಧ್ಯಕ್ಷ ಇಮ್ತಿಯಾಜ್ ಹುಸೇನ್ ಅವರ ಹಿರಿಯ ಸಹೋದರರಾಗಿದ್ದ ಮೃತರು ತಾಯಿ, ಆರು ಜನ ಸಹೋದರರು, ಓರ್ವ ಸಹೋದರಿ ಮತ್ತು ಅಪಾರ ಬಂಧು - ಬಳಗವನ್ನು ಅಗಲಿದ್ದಾರೆ. ಅವರ ಅಂತ್ಯಕ್ರಿಯೆಯನ್ನು ಭಾನುವಾರ ಸಂಜೆ ಪಿ.ಬಿ.ರಸ್ತೆಯ ಖಬರಸ್ತಾನದಲ್ಲಿ ನೆರವೇರಿಸಲಾಯಿತು.

**ಹೊಂಬಾಳ್ ಇ-ಮಾರ್ಟ್**
ದಾವಣಗೆರೆಯ ಎಲ್ಲಾ ಭಾಗಗಳಲ್ಲಿ ಮಿನಿ ಇ- ಮಾರ್ಟನ್ನು ಪ್ರಾರಂಭಿಸಲು ಸಮಾನ ಮನಸ್ಕ ಹೂಡಿಕೆದಾರರು ಬೇಕಾಗಿದ್ದಾರೆ. ನಿರ್ದಿಷ್ಟ ಆದಾಯದ ಜೊತೆಗೆ ಭದ್ರತೆಯನ್ನು ಒದಗಿಸಲಾಗುವುದು.
ಫೋ. : 90089 85112

**Wanted**
Investment Recruitment Manager
Candidates must have experience in investment/ insurance company.(IRDA licence holder). Minimum 4 years experience. Age : 30 years and above.
Location : Davangere, Shivmogga, Chitradurga,
Offered package is salary with performing incentives. Only interested candidates
82965 05683, 9035712217

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

### ಲೋಕಪ್ರಕಾಶ ಶಿಕ್ಷಣ ಸಂಸ್ಥೆಗೆ ಶೆಣೈ ಜಿಲ್ಲಾಧ್ಯಕ್ಷ

ದಾವಣಗೆರೆ, ಜೂ.6- ಧಾರವಾಡದ ಲೋಕಪ್ರಕಾಶ ಶಿಕ್ಷಣ, ಸಂಸ್ಕೃತಿ ಸಾಹಿತ್ಯ ಸೇವಾ ಸಂಸ್ಥೆಯ ಜಿಲ್ಲಾಧ್ಯಕ್ಷರಾಗಿ ಸಾಲಿಗ್ರಾಮ ಗಣೇಶ್ ಶೆಣೈ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಂಸ್ಥೆಯ ರಾಜ್ಯಾಧ್ಯಕ್ಷ ಡಾ. ಐ.ಎ. ಲೋಕಾಪುರ್ ತಿಳಿಸಿದ್ದಾರೆ.

### ಬಾಡಾ ಗ್ರಾಮದ ಮೌನೇಶ್ ನಿಧನ



ಬಾಡಾ ಗ್ರಾಮದ ಮೌನೇಶ್ ಹೆಚ್.ಎನ್. ಅವರು ದಿನಾಂಕ 06.06.2021ರ ಮಧ್ಯರಾತ್ರಿ 12.30ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸಹೋದರರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 07.06.2021ರ ಬೆಳಿಗ್ಗೆ 10ಕ್ಕೆ ಬಾಡಾ ಗ್ರಾಮದಲ್ಲಿ ನೆರವೇರಲಿದೆ.

# ಕೊಲೆ ಶಂಕೆ : ಹೂತಿದ್ದ ಶವದ ಮರಣೋತ್ತರ ಪರೀಕ್ಷೆ



ಹೊನ್ನಾಳಿ

ಹೊನ್ನಾಳಿ, ಜೂ.6- ಕೊಲೆ ಶಂಕೆ ಹಿನ್ನೆಲೆಯಲ್ಲಿ ಹೂತಿದ್ದ ಶವದ ಮರಣೋತ್ತರ ಪರೀಕ್ಷೆ ನಡೆಸಿದ ಘಟನೆ ತಾಲ್ಲೂಕಿನ ಬುಳ್ಳಾಪುರ ಗ್ರಾಮದಲ್ಲಿ ಶನಿವಾರ ನಡೆದಿದೆ.

ತುಂಗಭದ್ರಾ ನದಿಯಲ್ಲಿ ಮೇ 9 ರಂದು ದೊರೆತ ಶವವನ್ನು ಯಾರೂ ಗುರುತಿಸಲಾಗದ ಕಾರಣ ಹೊನ್ನಾಳಿ ಪೊಲೀಸರು ಅನಾಥ ಶವವೆಂದು ದೂರು ದಾಖಲಿಸಿ ಕೊಂಡು ನದಿ ದಡದಲ್ಲಿಯೇ ಅಂತ್ಯ ಸಂಸ್ಕಾರ ಮಾಡಿದ್ದರು.

ಮೇ 31 ರಂದು ಗ್ರಾಮದ ನಾಲ್ವರು ಹಾಗೂ ಸಾಸ್ವೆಹಳ್ಳಿಯ ಓರ್ವನ ಮೇಲೆ ಅನುಮಾನ ವ್ಯಕ್ತಪಡಿಸಿ ದೂರು ನೀಡಲಾಗಿತ್ತು. ಈ ಸಂಬಂಧ ಹೊನ್ನಾಳಿ ಪೊಲೀಸರು ಬುಳ್ಳಾಪುರ ಗ್ರಾಮದ ನಾಗರಾಜ್, ಪ್ರವೀಣ, ರಾಜ, ಮಂಜುನಾಥ, ಸಾಸ್ವೆಹಳ್ಳಿಯ ನಾಗರಾಜ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಪ್ರಕರಣ ಬಯಲಾಗಿದೆ. ಮರಣೋತ್ತರ ಪರೀಕ್ಷೆಯಿಂದ ಕೊಲೆಯೋ ಅಥವಾ ಸಹಜ ಸಾವೋ ಎಂಬುದರ ಬಗ್ಗೆ ತಿಳಿಯಬೇಕಿದೆ.

ತಹಶೀಲ್ದಾರ್ ಬಸನಗೌಡ ಕೋಟೂರ, ಸಿಪಿಐ ದೇವರಾಜ್, ಪಿಎಸ್‌ಐ ಬಸವನಗೌಡ ಬಿರಾದಾರ್, ವೈದ್ಯರಾದ ಡಾ. ಹೆಚ್.ಜೆ. ನರೇಂದ್ರ, ವಿಧಿ ವಿಜ್ಞಾನ ಪ್ರಯೋಗಾಲಯದ ನಿರ್ದೇಶಕರಾದ ಭಾರ್ಗವಿ, ಉಪತಹಶೀಲ್ದಾರ್ ಎಸ್. ಪರಮೇಶ್, ಆರ್.ಐ ದಿನೇಶ್‌ಬಾಬು, ಎಎಸ್‌ಐ ಟಿ. ಪರಶುರಾಮ್ ಸ್ಥಳದಲ್ಲಿ ಉಪಸ್ಥಿತರಿದ್ದರು.

# ಸಂಶೋಧನಾ ಸ್ಥಾನ : ಅರ್ಜಿ ಸಲ್ಲಿಕೆಗೆ ದಿನಾಂಕ ವಿಸ್ತರಣೆ

ದಾವಣಗೆರೆ, ಜೂ.6- ದಾವಣಗೆರೆ ವಿಶ್ವವಿದ್ಯಾನಿಲಯ ವತಿಯಿಂದ ಪಿ.ಹೆಚ್.ಡಿ, ಪಿ.ಡಿ. ಎಫ್, ಡಿ.ಎಸ್‌ಸಿ, ಡಿ.ಲಿಟ್, ಸಂಶೋಧನಾ ಸ್ಥಾನಗಳಿಗೆ ಅರ್ಜಿ ಸಲ್ಲಿಕೆ ಅವಧಿಯನ್ನು ಜೂನ್ 30 ರವರೆಗೆ ವಿಸ್ತರಿಸಲಾಗಿದೆ. ಪಿ.ಹೆಚ್.ಡಿ, ಪಿ.ಡಿ.ಎಫ್, ಡಿ.ಎಸ್‌ಸಿ, ಡಿ.ಲಿಟ್, ಸಂಶೋಧನಾ ಸ್ಥಾನ ಗಳಿಗೆ ಅರ್ಜಿ ಸಲ್ಲಿಕೆ ಅವಧಿಯನ್ನು ಇದೇ ದಿನಾಂಕ 30 ರವರೆಗೆ ವಿಸ್ತರಿಸಲಾಗಿದೆ. ಪಿ.ಹೆಚ್. ಡಿ, ಪಿ.ಡಿ.ಎಫ್, ಡಿ.ಎಸ್‌ಸಿ,ಡಿ.ಲಿಟ್, ಸಂಶೋಧನಾ ಸ್ಥಾನಗಳಿಗೆ ಅರ್ಜಿಗಳನ್ನು ಡೌನ್‌ಲೌಡ್ ಮಾಡಿಕೊಳ್ಳಲು ವಿಶ್ವವಿದ್ಯಾನಿಲ ಯದ ವೆಬ್‌ಸೈಟ್ www.davangereuniversity.ac.in ಸಂಪರ್ಕಿಸಬಹುದು ಎಂದು ವಿವಿ ಕುಲಸಚಿವರು ತಿಳಿಸಿದ್ದಾರೆ.

ಕೊರೊನಾ ಸಂಕಷ್ಟದಲ್ಲಿ ಪೆಟ್ರೋಲ್ ಶತಕದಂಚಿಗೆ

# ಕ್ರಿಕೆಟ್ ಪ್ಯಾಡ್ ಕಟ್ಟಿಕೊಂಡು ಯುವ ಕಾಂಗ್ರೆಸ್ ಆಕ್ರೋಶ




ದಾವಣಗೆರೆ, ಜೂ.6- ಕೊರೊನಾ ಸಂಕಷ್ಟದ ಸಮಯದಲ್ಲಿ ಪೆಟ್ರೋಲ್ ದರ ಶತಕಕ್ಕೆ ದಾಟಿಸಿ, ದೇಶದ ನಿವಾಸಿಗಳಿಗೆ ಪ್ರಧಾನಮಂತ್ರಿ ಅತ್ಯುನ್ನತ ಕೊಡುಗೆ ನೀಡಿದ್ದಾರೆ ಎಂದು ಆಕ್ಷೇಪಿಸಿ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ನಗರದಲ್ಲಿ ನಿನ್ನೆ ವಿನೂತನವಾಗಿ ಪ್ರತಿಭಟನೆ ನಡೆಸಿತು.

ಬೂದಾಳ್ ರಸ್ತೆಯ ಪೆಟ್ರೋಲ್ ಬಂಕ್ ಆವರಣದಲ್ಲಿ ಯುವ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಸೈಯದ್ ಖಾಲಿದ್ ಅಹಮ್ಮದ್, ಜಿಲ್ಲಾಧ್ಯಕ್ಷ ಸೈಯದ್ ಇರ್ಫಾನ್ ನೇತೃತ್ವದಲ್ಲಿ ಕ್ರಿಕೆಟ್ ಪ್ಯಾಡ್ ಕಟ್ಟಿಕೊಂಡು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಯುವ ಕಾಂಗ್ರೆಸ್ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಲಾಯಿತು.

ಯುವ ಕಾಂಗ್ರೆಸ್‌ನ ಸೈಯದ್ ಖಾಲಿದ್ ಅಹಮ್ಮದ್ ಮಾತನಾಡಿ, ಕೊರೊನಾ ಮೊದಲ ಮತ್ತು ಎರಡನೇ ಅಲೆಯ ಹೊಡೆತಕ್ಕೆ ಇಡೀ ಜಗತ್ತೇ ಸಂಕಷ್ಟ ಅನುಭವಿಸುತ್ತಿದೆ. ಅದರಲ್ಲೂ ಭಾರತದಲ್ಲಿ, ಕರ್ನಾಟಕದಲ್ಲಿ ಲಾಕ್‌ಡೌನ್‌ನಿಂದಾಗಿ ಜನರಿಗೆ ಒಂದು ಹೊತ್ತಿನ ಕೂಳಿಗೂ ಪರದಾಡುವ ಸ್ಥಿತಿ ಇದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್ ದರವನ್ನು ಶತಕದಂಚಿಗೆ ಕೊಂಡೊಯ್ದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸೈಯದ್ ಇರ್ಫಾನ್, ಕಿಸಾನ್ ಕಾಂಗ್ರೆಸ್ ಜಿಲ್ಲಾ ಕಾರ್ಯದರ್ಶಿ ಮೊಹಮ್ಮದ್ ಜಿಕ್ರಿಯಾ ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ಸಾಗರ್.ಎಲ್.ಎಂ.ಹೆಚ್, ಕಿಸಾನ್ ಕಾಂಗ್ರೆಸ್ ಜಿಲ್ಲಾ ಕಾರ್ಯದರ್ಶಿ ಮೊಹಮ್ಮದ್ ಜಿಕ್ರಿಯಾ, ಅಲ್ಪಸಂಖ್ಯಾತರ ಕಾಂಗ್ರೆಸ್ ಮುಖಂಡ ರಿಯಾಜುದ್ದೀನ್, ಯುವ ಮುಖಂಡರುಗಳಾದ ವಾಜಿದ್, ಮಹಬೂಬ್ ಬಾಷಾ, ಫಜ್ಲೂರ್ ರಹಮಾನ್ ಮುಬಾರಕ್, ರಾಜಿಕ್, ನದೀಮ್ ಇತರರು ಭಾಗವಹಿಸಿದ್ದರು.

# ಅರಣ್ಯ ನಾಶ : ಕೃತಕ ಆಕ್ಸಿಜನ್ ಮೊರೆಹೋಗುವ ಪರಿಸ್ಥಿತಿ

ಹರಪನಹಳ್ಳಿ : ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಸಂಸದ ಸಿದ್ದೇಶ್ವರ ವ್ಯಾಕುಲತೆ



ಹರಪನಹಳ್ಳಿ, ಜೂ.6- ನಾಗರಿಕತೆ ಬೆಳೆದಂತೆ ಅರಣ್ಯ ನಾಶದಿಂದಾಗಿ ಆಮ್ಲಜನಕದ ಕೊರತೆಯುಂಟಾಗಿ, ಕೃತಕ ಆಕ್ಸಿಜನ್ ಮೊರೆ ಹೋಗುವ ಪರಿಸ್ಥಿತಿ ಎದುರಾಗಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಕಳವಳ ವ್ಯಕ್ತಪಡಿಸಿದರು.

ಇಲ್ಲಿನ ಸಾರ್ವಜನಿಕ ಆಸ್ಪತ್ರೆ ಹಿಂಭಾಗದಲ್ಲಿ ಜಿ. ಮಲ್ಲಿಕಾರ್ಜನಪ್ಪ, ಶ್ರೀಮತಿ ಹಾಲಮ್ಮ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಕ್ಸಿಜನ್ ಉತ್ಪಾದನಾ ಘಟಕ ಸ್ಥಾಪನೆಗೆ ಭೂಮಿ ಪೂಜೆ ನೆರವೇರಿಸಿದ ನಂತರ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗಿಡ ನೆಟ್ಟು ಅವರು ಮಾತನಾಡಿದರು.

ಭೂಮಿಯಲ್ಲಿ ಕೆಲ ಸೂಕ್ಷ್ಮ ಜೀವಿಗಳನ್ನು ಹೊರತುಪಡಿಸಿ, ಉಳಿದೆಲ್ಲಾ ಜೀವಕೋಶಗಳಿಗೆ ಸತತವಾಗಿ ಆಮ್ಲಜನಕದ ಸರಬರಾಜು ಇಲ್ಲದಿದ್ದರೆ ಅವುಗಳ ಕೆಲಸ ನಿಂತುಹೋಗುತ್ತದೆ. ಈ ವರ್ಷ ಹೆಚ್ಚು ಹೆಚ್ಚು ಮರಗಿಡಗಳನ್ನು ಬೆಳೆಸಿ ಮಾಲಿನ್ಯದ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸಿ ನಮ್ಮ ಸುತ್ತಲಿನ ಪರಿಸರವನ್ನು ಪುನಶ್ಚೇತನಗೊಳಿಸಬೇಕಾಗಿದೆ ಎಂದರು.

ಶಾಸಕ ಜಿ. ಕರುಣಾಕರ ರೆಡ್ಡಿ ಮಾತನಾಡಿ, ಅಭಿವೃದ್ಧಿಯ ಹೆಸರಿನಲ್ಲಿ ಇಂದು ಗಿಡಮರಗಳು ನಾಶವಾಗುತ್ತಿದ್ದು, ರೈತರು ಸೇರಿದಂತೆ ಎಲ್ಲಾ ವರ್ಗದ ಜನರು ಗಿಡಗಳನ್ನು ನೆಟ್ಟು ಲಾಲನೆ ಪಾಲನೆ ಮಾಡಬೇಕಾದ ಅಗತ್ಯತೆ ಇದೆ. ಮನೆ ಮುಂದೆ ಜಾಗ ಇರುವವರು ಕಡ್ಡಾಯವಾಗಿ ಗಿಡಮರಗಳನ್ನು ಬೆಳೆಸಬೇಕು. ಜಾಗವಿಲ್ಲದವರು ಆಕ್ಸಿಜನ್ ಉತ್ಪಾದಿಸುವಂತಹ ಒಳಾಂಗಣ ಸಸ್ಯಗಳನ್ನು ಬೆಳೆಸಿ, ಆಮ್ಲಜನಕವನ್ನು ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ವಲಯ ಅರಣ್ಯಾಧಿಕಾರಿ ಡಿ. ಭರತ್ ಮಾತನಾಡಿ, ಪ್ರತಿಯೊಬ್ಬರು ಒಂದು ಗಿಡ ನೆಟ್ಟು ಸಾಕಿದರೆ ಪರಿಸರ ರಕ್ಷಣೆ ಮಾಡಿದಂತಾಗುತ್ತದೆ ಎಂದರು.

ಜಿಲ್ಲಾಧಿಕಾರಿ ಪವನ್ ಕುಮಾರ್ ಮಲಪಾಟಿ, ಪುರಸಭಾ ಅಧ್ಯಕ್ಷ ಮಂಜುನಾಥ ಇಜಂತಕರ್, ತಾಲ್ಲೂಕು ಬಿಜೆಪಿ ಅಧ್ಯಕ್ಷ ಸತ್ತೂರು ಹಾಲೇಶ್, ಉಪಾಧ್ಯಕ್ಷ ನಿಟ್ಟೂರು ಸಣ್ಣಹಾಲಪ್ಪ, ಜಿಲ್ಲಾ ಬಿಜೆಪಿ ಎಸ್.ಟಿ. ಘಟಕದ ಕಾರ್ಯದರ್ಶಿ ಆರ್. ಲೋಕೇಶ್, ತಾಲ್ಲೂಕು ಪಂಚಾಯ್ತಿ ಸದಸ್ಯ ಟಿ. ನಾಗರಾಜಪ್ಪ, ಉಪವಿಭಾಗಾಧಿಕಾರಿ ಚಂದ್ರಶೇಖರಯ್ಯ, ತಹಶೀಲ್ದಾರ್ ನಂದೀಶ, ವೈದ್ಯಾಧಿಕಾರಿ ಪಿ.ಕೆ. ವೆಂಕಟೇಶ್, ಆಸ್ಪತ್ರೆ ಮುಖ್ಯ ವೈದ್ಯ ಡಾ. ಶಿವಕುಮಾರ್, ಸಿಪಿಐ ನಾಗರಾಜ ಎಂ. ಕಮ್ಮಾರ, ಪಿಎಸ್‌ಐ ಪ್ರಕಾಶ್, ಪುರಸಭಾ ಮುಖ್ಯಾಧಿಕಾರಿ ನಾಗರಾಜನಾಯ್ಕ್, ಮುಖಂಡರಾದ ಆರುಂಡಿ ನಾಗರಾಜ, ರಾಘವೇಂದ್ರಶೆಟ್ಟಿ, ಎಂ. ಸಂತೋಷ, ಅರಣ್ಯ ಇಲಾಖೆಯ ರಾಥೋಡ್, ಯು.ಪಿ. ನಾಗರಾಜ, ಎಂ. ಸಂತೋಷ್ ಇನ್ನಿತರರಿದ್ದರು.

## ತಾಜ್‌ಪ್ಯಾಲೇಸ್‌ನಿಂದ ಸೋಂಕಿತರು ಬಿಡುಗಡೆ

ದಾವಣಗೆರೆ, ಜೂ.6- ನಗರದ ತಾಜ್ ಪ್ಯಾಲೇಸ್‌ನಲ್ಲಿನ ಕೋವಿಡ್ ಕೇರ್ ಸೆಂಟರ್‌ನಲ್ಲಿ 22 ಜನ ಕೋವಿಡ್ ಸೋಂಕಿತರು ಚಿಕಿತ್ಸೆ ಪಡೆದು ನಿನ್ನೆ ಬಿಡುಗಡೆಗೊಂಡರು.

ಈ ಸಂದರ್ಭದಲ್ಲಿ ತಾಜ್ ಪ್ಯಾಲೆಸ್ ಮಾಲೀಕ ದಾದಾಪೀರ್, ಪಾಲಿಕೆ ಸದಸ್ಯರಾದ ಸಯೀದ್ ಚಾರ್ಲಿ, ಜೆ.ಅಮಾನುಲ್ಲಾ ಖಾನ್, ದಾದು ಸೇಠ್, ವಾಸಿಂ, ಖಾದರ್ ಬಾಷಾ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಮುಸ್ಲಿಂ ಸಮಾಜದಿಂದ ಆಹಾರಧಾನ್ಯ ಕಿಟ್ ವಿತರಣೆ



ದಾವಣಗೆರೆ, ಜೂ.6- ನಗರದ ಕಡುಬಡ ವರಿಗೆ ಮುಸ್ಲಿಂ ಸಮಾಜದ ವತಿಯಿಂದ 40 ಸಾವಿರ ಆಹಾರಧಾನ್ಯ ಕಿಟ್‌ಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಮುಸ್ಲಿಂ ಸಮಾಜದ ಮಾಜಿ ಅಧ್ಯಕ್ಷ ಸಾಧಿಕ್ ಪೈಲ್ವಾನ್ ಸಾಬ್, ವಿಧಾನಪರಿಷತ್ ಮಾಜಿ ಸದಸ್ಯ ಕೆ. ಅಬ್ದುಲ್ ಜಬ್ಬಾರ್ ಸಾಬ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಹನುಮಂತ ರಾಯ, ವಕೀಲ ಎನ್.ಎಂ. ಆಂಜನೇಯ ಮತ್ತಿತರರು ಉಪಸ್ಥಿತರಿದ್ದರು.

## ಸ್ವರ್ಣ ದೇಗುಲದಲ್ಲಿ ಖಲಿಸ್ತಾನ ಪರ ಘೋಷಣೆ

ಅಮೃತ್‌ಸರ, ಜೂ. 6 – ಶಿರೋಮಣಿ ಅಕಾಲಿ ದಳ (ಮಾನ್) ಬೆಂಬಲಿಗರು ಸ್ವರ್ಣ ದೇಗುಲದಲ್ಲಿ ಖಲಿಸ್ತಾನ ಪರ ಘೋಷಣೆ ಕೂಗಿದ ಘಟನೆ ನಡೆದಿದೆ. ಆಪರೇಷನ್ ಬ್ಲೂ ಸ್ಟಾರ್‌ಗೆ 37 ವರ್ಷಗಳು ತುಂಬಿದ ಸಂದರ್ಭದಲ್ಲಿ ಖಲಿಸ್ತಾನ ಪರ ಘೋಷಣೆ ಕೂಗಲಾಗಿದೆ. ಹಲವಾರು ಯುವಕರು ಖಲಿಸ್ತಾನ ಪರ ಭಿತ್ತಿಪತ್ರಗಳನ್ನು ಹಿಡಿದಿದ್ದು ಕಂಡು ಬಂದಿದೆ.

1984ರಲ್ಲಿ ನಡೆದಿದ್ದು ಹತ್ಯಾಕಾಂಡ ಎಂದಿರುವ ಜಾತೇದಾರ್ ಅಕಾಲ್ ತಖ್ತ್ ಗ್ಯಾನಿ ಹರ್‌ಪ್ರೀತ್ ಸಿಂಗ್, ಸಿಖ್ ಸಮುದಾಯ ಒಂದಾಗ ಬೇಕು ಎಂದು ಕರೆ ನೀಡಿದ್ದಾರೆ.

ಸ್ವರ್ಣ ಮಂದಿರದಲ್ಲಿ ಸೇರಿದ್ದ ಉಗ್ರರನ್ನು ಹೊರದಬ್ಬಲು 1984ರಲ್ಲಿ ಸೈನ್ಯ ಆಪರೇಷನ್ ಬ್ಲೂಸ್ಟಾರ್ ಕಾರ್ಯಾಚರಣೆ ನಡೆಸಿತ್ತು. ದೆಹಲಿಯಲ್ಲಿ ಜನವರಿ 26ರಂದು ರೈತರ ಪರ ಹೋರಾಟದಲ್ಲಿ ಭಾಗಿಯಾಗಿ ಪ್ರಚೋದನಕಾರಿ ಯಾಗಿ ವರ್ತಿಸಿದ ಕಾರಣಕ್ಕೆ ಬಂಧಿಸಲಾಗಿದ್ದ ನಟ ಹಾಗೂ ಕಾರ್ಯಕರ್ತ ದೀಪ್ ಸಿಧು ಸಹ ಸ್ವರ್ಣ ದೇಗುಲದಲ್ಲಿದ್ದದ್ದು ಕಂಡು ಬಂತು.

## ಮಳೆಯಿಂದ ರಸ್ತೆ ಜಲಾವೃತ



ಕೊಟ್ಟೂರು

ಕೊಟ್ಟೂರು, ಜೂ. 6 - ಕಳೆದ ಶನಿವಾರ ಕೊಟ್ಟೂರು ಮತ್ತು ಸುತ್ತಮುತ್ತ ಉತ್ತಮವಾಗಿ ಮಳೆಯಾಗಿದ್ದು, ಸಮೀಪದ ಇಟ್ಟಿಗಿ ರಸ್ತೆಯ ರೈಲ್ವೆ ಟ್ರ್ಯಾಕ್ ಕೆಳಭಾಗದ ಸೇತುವೆ ಮಳೆಯಿಂದ ಜಲಾವೃತ ವಾಗಿದ್ದು, ಕೆಲ ಕಾಲ ವಾಹನಗಳ ಸಂಚಾರದಲ್ಲಿ ಅಸ್ತವ್ಯಸ್ತವಾಗಿತ್ತು.

## ಪೆಟ್ರೋಲ್, ಡೀಸೆಲ್ ಹೆಚ್ಚಳಕ್ಕೆ ಖಂಡನೆ



ದಾವಣಗೆರೆ, ಜೂ. 6 - ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೆಚ್ಚಳದಿಂದಾಗಿ ಪ್ರತಿನಿತ್ಯ ಬಳಸುವ ಅಗತ್ಯ ಸಾಮಗ್ರಿಗಳ ಬೆಲೆ ಹೆಚ್ಚಳ ತಡೆಯುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂಪೂರ್ಣ ವಿಫಲವಾಗಿವೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯ ದರ್ಶಿ ದಿನೇಶ್ ಕೆ.ಶೆಟ್ಟಿ ಖಂಡಿಸಿದ್ದಾರೆ.

ಪಂಚರಾಜ್ಯಗಳ ಚುನಾವಣೆ ನಂತರ 21 ಬಾರಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೆಚ್ಚಳ ಮಾಡುವ ಮೂಲಕ ಈಗಾಗಲೇ ಲಾಕ್‌ಡೌನ್‌ನಿಂದಾಗಿ ಆರ್ಥಿಕ ವಾಗಿ ಸಂಕಷ್ಟದಲ್ಲಿರುವವರಿಗೆ ಗಾಯದ ಮೇಲೆ ಬರೆ ಹಾಕಿದಂತಾಗಿದೆ ಎಂದು ದೂರಿದ್ದಾರೆ.

ಕೊರೊನಾದಿಂದ ಬೆಡ್ ಸಿಗದೇ ದಿನಕ್ಕೆ ಸಾವಿರಾರು ಜನರು ಸಾವನ್ನಪ್ಪುತ್ತಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನವಿರೋಧಿ ಧೋರಣೆಯಿಂದ ಆರ್ಥಿಕ ಸಂಕಷ್ಟಕ್ಕೆ ನಲುಗಿದ ಜನತೆ ಆತ್ಮಹತ್ಯೆ ದಾರಿ ಹಿಡಿಯಬಹುದು ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ದೇಶದ ಜನರಿಗೆ ಸಮರ್ಪಕವಾಗಿ ಲಸಿಕೆ ನೀಡುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದ್ದು, ದೇಶದ ಎಲ್ಲಾ ಜನರಿಗೂ ವಾರ್ಡ್‌ವಾರು ಲಸಿಕೆ ನೀಡಲು ಕೇಂದ್ರ - ರಾಜ್ಯ ಸರ್ಕಾರಗಳು ಕ್ರಮ ಕೈಗೊಳ್ಳಬೇಕು. ಇದರ ಜೊತೆಗೆ ಲಸಿಕೆಯನ್ನು ಮುಕ್ತ ಮಾರುಕಟ್ಟೆಗೆ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

## ಬ್ಯೂಟಿ ಪಾರ್ಲರ್‌ಗಳಿಗೆ ಸರ್ಕಾರ ಪ್ಯಾಕೇಜ್ ನೀಡಲು ಒತ್ತಾಯ



ದಾವಣಗೆರೆ, ಜೂ.6- ಕೊರೊನಾ ಸಂದರ್ಭದಲ್ಲಿ ಆಗಿರುವ ಲಾಕ್‌ಡೌನ್ ಪರಿಣಾಮ ಸಂಕಷ್ಟದಲ್ಲಿರುವ ಬ್ಯೂಟಿ ಪಾರ್ಲರ್ ವೃತ್ತಿ ವರ್ಗವನ್ನು ಗಣನೆಗೆ ತೆಗೆದುಕೊಳ್ಳದ ರಾಜ್ಯ ಸರ್ಕಾರದ ಕ್ರಮವನ್ನು ಜಿಲ್ಲಾ ಬ್ಯೂಟಿ ಪಾರ್ಲರ್ ಅಸೋಸಿಯೇಷನ್ ಅಧ್ಯಕ್ಷರಾದ ಕವಿತಾ ಚಂದ್ರಶೇಖರ್ ಖಂಡಿಸಿದ್ದಾರೆ.

ಬ್ಯೂಟಿ ಪಾರ್ಲರ್ ವೃತ್ತಿಗಾಗಿ ಲಕ್ಷಾಂತರ ರೂ.ಗಳನ್ನು ಹೂಡಿಕೆ ಮಾಡಿದ್ದು, ಸಾಲದ ಕಂತು, ಬಾಡಿಗೆ ಕಟ್ಟಲು, ಕುಟುಂಬ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಸರ್ಕಾರದ ಪ್ಯಾಕೇಜ್‌ನಲ್ಲಿ ಈ ವೃತ್ತಿದಾರರಿಗೆ ಅನ್ಯಾಯ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಬ್ಯೂಟಿ ಪಾರ್ಲರ್ ವೃತ್ತಿಯವರೂ ಸಹ ಸರ್ಕಾರಕ್ಕೆ ತೆರಿಗೆ ಪಾವತಿಸುತ್ತಾರೆ. ಸರ್ಕಾರದ ಪ್ಯಾಕೇಜನ್ನು ಪಡೆಯಲು ನಮಗೂ ಹಕ್ಕಿದೆ. ಕಳೆದ ವರ್ಷದಲ್ಲಿಯೂ ಸರ್ಕಾರದಿಂದ ಯಾವುದೇ ರೀತಿಯ ನೆರವು ದೊರೆತಿಲ್ಲ. ಸರ್ಕಾರ ಈಗಲಾದರೂ ಸಹಾಯಹಸ್ತ ಚಾಚುವುದರ ಮೂಲಕ ಪ್ಯಾಕೇಜ್ ನೀಡಬೇಕು ಎಂದು ಅಸೋಸಿಯೇಷನ್‌ನ ಕಾರ್ಯದರ್ಶಿಗಳಾದ ಗೀತಾ ರೆಡ್ಡಿ, ಆಶಾ ಕೃಷ್ಣಮೂರ್ತಿ, ಪದ್ಮಾವತಿ, ಶೈಲಾ, ಸವಿತಾ, ಸೌಮ್ಯ,ಸೋನಿ ಒತ್ತಾಯಿಸಿದ್ದಾರೆ.

## ಸಂಕಷ್ಟದಲ್ಲಿದ್ದಲ್ಲಿರುವ ಬ್ರಾಹ್ಮಣ ಸಮಾಜದವರಿಗೆ ಧನ ಸಹಾಯ, ಕಿಟ್ ವಿತರಣೆ



ದಾವಣಗೆರೆ, ಜೂ.5- ಕೊರೊನಾ ಸೋಂಕು ಪರಿಣಾಮ ಆಗಿರುವ ಲಾಕ್‌ಡೌನ್‌ನಿಂದ ಸಂಕಷ್ಟದಲ್ಲಿರುವ ಬ್ರಾಹ್ಮಣ ಸಮಾಜ ಬಾಂಧವರಿಗೆ ಬ್ರಾಹ್ಮಣ ಸಮಾಜ ಸೇವಾ ಸಂಘದಿಂದ ಡಾ. ಎಂ.ಆರ್. ಹೊನ್ನತ್ತಿ, ಡಾ. ಲತಾ ಮತ್ತು ಪ್ರಕಾಶ್ ಕೊಡ್ಲಿಕೇರಿ ಹಾಗೂ ಡಾ. ಪಿ.ವಿ. ನಾಡಿಗೇರ್ (ಡೆಂಟಿಸ್ಟ್, ಹುಬ್ಬಳ್ಳಿ) ಅವರುಗಳು ನೀಡಿದ ಧನ ಸಹಾಯದಿಂದ 4 ಹಂತಗಳಲ್ಲಿ ಒಟ್ಟು 234 ಬಡ ಕುಟುಂಬಗಳಿಗೆ ರೂ. 1,000/- ಮೌಲ್ಯದ ದಿನಸಿ ಕಿಟ್‌ಗಳನ್ನು ಬ್ರಾಹ್ಮಣ ಸಮಾಜದ ಕಾರ್ಯಾಲಯದಲ್ಲಿ ವಿತರಿಸಲಾಯಿತು.

ದಿನಸಿ ಕಿಟ್ ವಿತರಣಾ ಕಾರ್ಯಕ್ರಮದಲ್ಲಿ ಸಮಾಜದ ಅಧ್ಯಕ್ಷ ಎಸ್.ಪಿ. ಸತ್ಯನಾರಾಯಣರಾವ್ ಅವರ ಅಧ್ಯಕ್ಷತೆಯಲ್ಲಿ ದಾನಿಗಳನ್ನು ಸನ್ಮಾನಿಸಲಾಯಿತು. ಸಮಾಜದ ಜಿಲ್ಲಾ ಅಧ್ಯಕ್ಷ ಡಾ. ಅಚ್ಯುತ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು. ಯು. ಬಾಲಕೃಷ್ಣ ವೈದ್ಯ ಹಾಗೂ ಸ್ನೇಹಿತರು ಫಲಾನುಭವಿಗಳಿಗೆ ತರಕಾರಿ ವಿತರಣೆ ಮಾಡಿದರು.

## ಕೂಡ್ಲಿಗಿ ನೂತನ ತಹಶೀಲ್ದಾರ್‌ಗೆ ಡಿಎಸ್‌ಎಸ್ ಸ್ವಾಗತ



ಕೂಡ್ಲಿಗಿ, ಜೂ.6- ತಾಲ್ಲೂಕಿನ ನೂತನ ತಹಶೀಲ್ದಾರ್ ಟಿ. ಜಗದೀಶ್ ಅವರನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ ತಾಲ್ಲೂಕು ಘಟಕ ಕೂಡ್ಲಿಗಿ ವತಿಯಿಂದ ಸ್ವಾಗತಿಸಲಾಯಿತು. ಈ ಸಂದರ್ಭದಲ್ಲಿ ಸಮಿತಿಯ ಪ್ರಮುಖರುಗಳಾದ ಎಸ್. ದುರುಗೇಶ್, ಕೆ. ಪರಶುರಾಮ್, ಡಿ.ಎಂ. ಈಶ್ವರಪ್ಪ, ಬಿ. ಮಹೇಶ್, ದುರುಗೇಶ್ ಬಡೆಲಡಕು, ತಿಪ್ಪೇಹಳ್ಳಿ ಮಾರೇಶ್, ತಿಪ್ಪೇಸ್ವಾಮಿ ಮತ್ತಿತರರು ಇದ್ದರು.

## ಹರಿಹರ : ಕೋವಿಡ್ ಸೆಂಟರ್‌ಗೆ ಹೆಚ್.ಎಸ್ ಶಿವಶಂಕರ್ ಭೇಟಿ



ಹರಿಹರ, ಜೂ.6- ಗುತ್ತೂರು ಕೋವಿಡ್ ಕೇರ್ ಸೆಂಟರ್‌ಗೆ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಭೇಟಿ ನೀಡಿದ್ದರು. ಅಲ್ಲಿನ ವ್ಯವಸ್ಥೆಯ ಬಗ್ಗೆ ಮಾಹಿತಿ ಪಡೆದುಕೊಂಡ ಅವರು, ಕೊರೊನಾ ಸೋಂಕಿತರಿಗೆ ಯಾವುದೇ ರೀತಿಯ ಭಯವನ್ನು ಇಟ್ಟುಕೊಳ್ಳದೆ ಉತ್ತಮ ಚಿಕಿತ್ಸೆ ಪಡೆದುಕೊಂಡು, ಧೈರ್ಯದಿಂದ ಇದ್ದು ಬೇಗನೆ ಗುಣಮುಖರಾಗುವಂತೆ ಹೇಳಿದರು. ಈ ಸಂದರ್ಭದಲ್ಲಿ ನಗರ ಸಭೆ ಸದಸ್ಯ ಪಿ.ಎನ್. ವಿರುಪಾಕ್ಷ, ಮೋಹನ್ ಕೊಂಡಜ್ಜಿ ಮತ್ತು ಇತರರು ಹಾಜರಿದ್ದರು.

## 6ನೇ ವಾರ್ಡಿನಲ್ಲಿ ಲಸಿಕೆ ಅಭಿಯಾನ



ದಾವಣಗೆರೆ, ಜೂ. 6- ನಗರ ಪಾಲಿಕೆಯ 6 ನೇ ವಾರ್ಡಿನ ವಿಜಯನಗರ ಬಡಾವಣೆಯಲ್ಲಿರುವ ಅಂಗನವಾಡಿ ಕೇಂದ್ರದಲ್ಲಿ ವಾರ್ಡಿನ 45 ವರ್ಷ ಮೇಲ್ಪಟ್ಟ 200 ಜನರಿಗೆ ಕೋವಿಶೀಲ್ಡ್ ಲಸಿಕೆ ಹಾಕಿಸಲಾಯಿತು. ಈ ಸಂದರ್ಭದಲ್ಲಿ ಲಸಿಕೆ ತೆಗೆದುಕೊಳ್ಳಲು ಬಂದ ನಾಗರಿಕರಿಗೆ ಸಂಸದ ಜಿ.ಎಂ. ಸಿದ್ದೇಶ್ವರ ಅವರ ಕಡೆಯಿಂದ ಜೆಮ್ ಸಿಪ್ ಜ್ಯೂಸ್ ವಿತರಣೆ ಮಾಡಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್ ನೆರವೇರಿಸಿದರು, ನಗರ ಪಾಲಿಕೆ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷ ಎಲ್.ಡಿ. ಗೋಣೆಪ್ಪ, ನಿಂಗೋಜಿ ರಾವ್, ನೀಲಮ್ಮ, ಎಲ್.ಜಿ ಬಸವರಾಜು, ಎಸ್. ಬಾಬು, ರವಿ ಉಪಸ್ಥಿತರಿದ್ದರು.

# ಸಾಮಾಜಿಕ ನ್ಯಾಯ ಕಲ್ಪಿಸಿದ್ದು ದೇವರಾಜ ಅರಸು



ಜಿಲ್ಲಾ ಕಾಂಗ್ರೆಸ್‌ನಿಂದ ನಡೆದ ಪುಣ್ಯಸ್ಮರಣೆಯಲ್ಲಿ ದೇವರಾಜ ಅರಸು ಸೇವೆ ಸ್ಮರಣೆ


ದಾವಣಗೆರೆ, ಜೂ.6- ಮಾಜಿ ಮುಖ್ಯಮಂತ್ರಿ ದಿ.ದೇವರಾಜ ಅರಸು ಅವರ ಪುಣ್ಯಸ್ಮರಣೆಯನ್ನು ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರ ಗೃಹ ಕಛೇರಿ 'ಶಿವ ಪಾರ್ವತಿ'ಯಲ್ಲಿ ಸರಳವಾಗಿ ಆಚರಿಸಲಾಯಿತು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಮಾತನಾಡಿ, 8 ವರ್ಷಗಳ ಕಾಲ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ದೇವರಾಜ ಅರಸು ಅವರು 'ಸಮಪಾಲು ಸಮಬಾಳು' ತತ್ವದಡಿ ಆಡಳಿತ ನಡೆಸಿ ಎಲ್ಲಾ ವರ್ಗದ ಜನತೆಗೆ ಅನುಕೂಲವಾಗುವಂತಹ ಯೋಜನೆಗಳನ್ನು ಜಾರಿಗೆ ತಂದರು ಎಂದು ಸ್ಮರಿಸಿದರು.

ಅರಸು ಅವರು, 12ನೇ ಶತಮಾನದಲ್ಲಿ ಬಸವಣ್ಣನವರು ಮಾಡಿದ ಸಾಮಾಜಿಕ ನ್ಯಾಯವನ್ನು ಮುಂದುವರೆಸಿಕೊಂಡು ಹೋದ ಮಹನೀಯರು. ಅವರು ಮುಖ್ಯಮಂತ್ರಿಯಾದಂತಹ ಸಂದರ್ಭದಲ್ಲಿ 'ಜೀತ ಪದ್ದತಿ', 'ಉಳುವವನೇ ಭೂಮಿ ಒಡೆಯ' ಎಂಬ ಕ್ರಾಂತಿಕಾರಿಕ ಮಸೂದೆಗಳನ್ನು ಜಾರಿ ಮಾಡಿದ್ದರು. ತಮ್ಮ ಜಮೀನನ್ನೂ ಸಹ ಹೂಳುವವನಿಗೆ ನೀಡುವ ಮೂಲಕ ಮಾದರಿಯಾಗಿದ್ದರು. ಶಾಮನೂರು ಶಿವಶಂಕರಪ್ಪನವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು ಎಂದು ಹೇಳಿದರು.

ಪಾಲಿಕೆ ಸದಸ್ಯರುಗಳಾದ ಎ.ನಾಗರಾಜ್, ಕೆ.ಚಮನ್ ಸಾಬ್, ಜಾಕೀರ್, ಸೈಯದ್ ಚಾರ್ಲಿ, ಉದಯ್ ಕುಮಾರ್, ಮುಖಂಡರುಗಳಾದ ಶಫೀಕ್ ಪಂಡಿತ್, ಸೀಮೆಎಣ್ಣೆ ಪರಮೇಶ್, ಕೊಡಪಾನ ದಾದಾಪೀರ್, ಲಾಲ್ ಆರೀಫ್, ಶಾಮನೂರು ಕುಮಾರ್, ಹರೀಶ್ ಕೆ.ಎಲ್. ಬಸಾಪುರ, ಮೊಟ್ಟೆ ದಾದಾಪೀರ್ ಮತ್ತಿತರರಿದ್ದರು.

## 80 ನೇ ವರ್ಷಕ್ಕೆ ಸಿರಿಗೆರೆ ನಾಗನಗೌಡ್ರು



ಮಲೇಬೆನ್ನೂರು, ಜೂ.6- ಹರಿಹರ ತಾಲ್ಲೂಕಿನ ಹಿರಿಯ ಮುತ್ಸದ್ಧಿ ರಾಜಕಾರಣಿ, ಹೊಳೆಸಿರಿಗೆರೆಯ ಮಾಜಿ ಪ್ರಧಾನ ಎನ್.ಜಿ ನಾಗನಗೌಡ್ರು 79 ವಸಂತಗಳನ್ನು ಪೂರೈಸಿ ಭಾನುವಾರ 80 ನೇ ವರ್ಷಕ್ಕೆ ಕಾಲಿಟ್ಟರು. ಬಿಜೆಪಿ ಮುಖಂಡರು ಅಷ್ಟೇ ಅಲ್ಲದೇ ಕಾಂಗ್ರೆಸ್ ಮತ್ತು ಜೆಡಿಎಸ್ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ನಾಗನಗೌಡರಿಗೆ ಹುಟ್ಟು ಹಬ್ಬದ ಶುಭಾಶಯ ಕೋರಿದರು.

## 38ನೇ ವಾರ್ಡಿನಲ್ಲಿ ಕೋವಿಡ್ 2ನೇ ಡೋಸ್ ಲಸಿಕಾ ಅಭಿಯಾನ




ದಾವಣಗೆರೆ, ಜೂ.6- ಕೋವಿಡ್ 2ನೇ ಡೋಸ್ ಲಸಿಕೆ ಹಾಕುವ ಕಾರ್ಯಕ್ರಮವು ನಗರ ಪಾಲಿಕೆಯ 38ನೇ ವಾರ್ಡಿನ ಐಎಂಎ ಹಾಲ್‌ನಲ್ಲಿ ಮೊನ್ನೆ ನಡೆಯಿತು. ಈ ವಾರ್ಡಿನ ಪಾಲಿಕೆ ಸದಸ್ಯ ಗಡಿಗುಡಾಳ್ ಜಿ.ಎಸ್.ಮಂಜುನಾಥ್ ಅವರ ನೇತೃತ್ವದಲ್ಲಿ ಈ ಕಾರ್ಯಕ್ರಮವನ್ನು ಏರ್ಪಡಾಗಿತ್ತು.

ವಾರ್ಡಿನ ಮುಖಂಡರುಗಳಾದ ಪ್ರಮೋದ್, ಪ್ರಜ್ವಲ್, ವಿವೇಕಾನಂದ ಕರೇಗೌಡ್ರು, ನವೀನ್ ನಲವಡಿ, ಆಲೂರು ಜ್ಯೋತಿರ್ಲಿಂಗ, ಜಿ.ಎಸ್.ಮನು, ಜಿ.ಎಸ್.ಮನೀಷ್, ನಿಖಿಲ್‌ಮಂತ್ರಿ ಮತ್ತಿತರರು ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುತ್ತಿರುವ ಗಡಿಗುಡಾಳ್ ಮಂಜುನಾಥ್ ಮತ್ತು ಇತರ ಮುಖಂಡರನ್ನು ಜಿ.ಎಸ್.ಸತೀಶ್ ಅಭಿನಂದಿಸಿದ್ದಾರೆ.

## ಬಾಲಕಿಯನ್ನು ಅಪಹರಿಸಿ ಅತ್ಯಾಚಾರ



ಹರಪನಹಳ್ಳಿ, ಜೂ.6- ಅಪ್ರಾಪ್ತ ಬಾಲಕಿಯನ್ನು ಅಪಹರಿಸಿ ಕೊಂಡು ಹೋಗಿ ಅತ್ಯಾಚಾರ ವೆಸಗಿದ ಯುವಕನೊಬ್ಬನನ್ನು ಇಲ್ಲಿನ ಪೊಲೀಸರು ಚೆನ್ನ ಪಟ್ಟಣ ದಲ್ಲಿ ಪತ್ತೆ ಹಚ್ಚಿ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ತಾಲ್ಲೂಕಿನ ಮತ್ತಿಹಳ್ಳಿ ಗ್ರಾಮದ ಪ್ರವೀಣ್ ಅಲಿಯಾಸ್ ಕೊಟ್ರೇಶ್ ಬಂಧಿತ ಆರೋಪಿ. ಆರೋಪಿ ತನ್ನ ಗ್ರಾಮದ 15 ವರ್ಷದ ಬಾಲಕಿಯನ್ನು ಕಳೆದ ಏಪ್ರಿಲ್ 16 ರಂದು ಅಪಹರಿಸಿಕೊಂ ಡು ಹೋಗಿದ್ದಾನೆಂದು ಆರೋಪಿಸಿ, ಸಂತ್ರ ಸ್ಥೆಯ ತಂದೆ ನೀಡಿದ ದೂರನ್ನು ಚಿಗಟೇರಿ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ್ದರು.

ಡಿವೈಎಸ್ಪಿ ವಿ.ಎಸ್. ಹಾಲಮೂರ್ತಿ ರಾವ್ ಮಾರ್ಗದರ್ಶನದಲ್ಲಿ ಸಿಪಿಐ ನಾಗರಾಜ್ ಎಂ. ಕಮ್ಮಾರ ನೇತೃತ್ವದಲ್ಲಿ ಪಿಎಸ್‌ಐ ನಾಗ ರಾಜ್, ಮುಖ್ಯಪೇದೆ ಮೋಹನ್ ಪಾಟೀಲ್, ಕುಮಾರ್ ಇತರೆ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಚೆನ್ನಪಟ್ಟಣದಲ್ಲಿದ್ದ ಆರೋಪಿ ಹಾಗೂ ಬಾಲಕಿ ಇಬ್ಬರನ್ನೂ ಪತ್ತೆ ಹಚ್ಚಿ ಕರೆದು ಕೊಂಡು ಬಂದು ವಿಚಾರಣೆ ಮಾಡಿದ್ದಾರೆ.

## ಪ್ರೀತಿ ವಿಚಾರದಲ್ಲಿ ಮೋಸ ಯುವತಿ ಆತ್ಮಹತ್ಯೆ

ದಾವಣಗೆರೆ, ಜೂ.6- ಪ್ರೀತಿಸುತ್ತಿದ್ದ ಯುವಕ ತನಗೆ ಮೋಸ ಮಾಡಿರುವುದಾಗಿ ಆರೋಪಿಸಿ, ವಿಡಿಯೋ ಮಾಡಿ ಯುವತಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಭರತ್ ಕಾಲೋನಿಯಲ್ಲಿ ನಡೆದಿದೆ.

ಬ್ಯೂಟಿಷಿಯನ್ ಆಗಿ ಕೆಲಸ ಮಾಡುತ್ತಿದ್ದ ಆಶಾ (26) ಆತ್ಮಹತ್ಯೆ ಮಾಡಿಕೊಂಡ ಯುವತಿ. ನಗರದ ಮೆಸ್ಕಾಂನಲ್ಲಿ ಕೆಲಸ ಮಾಡುತ್ತಿದ್ದ ಈರಣ್ಣ ಮತ್ತು ಆಶಾ ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದರು ಎನ್ನಲಾಗಿದೆ.

ಈರಣ್ಣನಿಗೆ ಮೊದಲೇ ಮದುವೆಯಾಗಿತ್ತು. ಈ ವಿಷಯ ತಿಳಿದ ಆಶಾ ಸೆಲ್ಫ್ ವಿಡಿಯೋ ಮಾಡಿಕೊಂಡು, ನೋವು ಹೇಳಿಕೊಂಡು ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ನನ್ನ ಸಾವಿಗೆ ಈರಣ್ಣನೇ ಕಾರಣ ಎಂದು ನೋವು ಹೇಳಿಕೊಂಡಿದ್ದಲ್ಲದೇ, ನನಗೆ ಮೋಸ ಮಾಡಿದ ಈರಣ್ಣನಿಗೆ ಗಲ್ಲು ಶಿಕ್ಷೆಯಾಗಬೇಕು ಎಂದು ಮೃತ ಯುವತಿ ತಿಳಿಸಿದ್ದಾಳೆ. ಆರ್‌ಎಂಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ನುಡಿದಂತೆ ನಡೆದು ಸ್ವಂತ ಹಣದಲ್ಲಿ
ಉಚಿತವಾಗಿ ಕೊರೊನಾ ಲಸಿಕೆ ನೀಡಿದ
'ದಾವಣಗೆರೆ ಧಣಿ' ಕುಟುಂಬಕ್ಕೆ ಕೃತಜ್ಞತೆಗಳು
ದಾವಣಗೆರೆ ಜನತೆಗೆ ಕೋವಿಡ್-19 ಲಸಿಕೆಯನ್ನು ತಮ್ಮ ಸ್ವಂತ ಹಣದಲ್ಲಿ ಉಚಿತವಾಗಿ ನೀಡಿದ ದಾವಣಗೆರೆಯ ಧಣಿ, ಸರ್ವಜನಾಂಗದ ನಾಯಕರೂ, ದೀನ ದಲಿತರ ಸಹಕಾರಮೂರ್ತಿ, ಇವನಾರವ-ಇವನಾರವ ಎಂದೆನಿಸದಿರಯ್ಯ, ಇವ ನಮ್ಮವ-ಇವ ನಮ್ಮವ ಎಂದೆನಿಸಯ್ಯ ಕೂಡಲಸಂಗಮದೇವ ಎಂಬ ಬಸವಣ್ಣನವರ ವಚನದಂತೆ, ಸರ್ವ ಪಕ್ಷದವರಿಗೂ ಲಸಿಕೆ ನೀಡಿ, ಜನಸೇವೆಯೇ ಕಾಯಕವೇ ಕೈಲಾಸ ಎಂದು ದಾವಣಗೆರೆ ಜನತೆಗಾಗಿ ಶ್ರಮಿಸುತ್ತಿರುವ ಶಾಸಕರಾದ
**ಡಾ|| ಶಾಮನೂರು ಶಿವಶಂಕರಪ್ಪನವರು** ಮತ್ತು
ಮಾಜಿ ಸಚಿವರಾದ **ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್**ರವರಿಗೆ
ದಾವಣಗೆರೆ ಜನತೆಯ ಪರವಾಗಿ ಹಾಗೂ ಶಾಮನೂರು ಗ್ರಾಮಸ್ಥರ ಪರವಾಗಿ ಹೃದಯಪೂರ್ವಕ ಕೃತಜ್ಞತೆಗಳು.
**ಕಣ್ಣಾಳ ಅಂಜಿನಪ್ಪ,** ಜಿಲ್ಲಾ ಕಾಂಗ್ರೆಸ್ ಮುಖಂಡರು
ಸಂಸ್ಥಾಪಕ ಅಧ್ಯಕ್ಷರು, ಎಸ್.ಎಸ್. ಮಲ್ಲಿಕಾರ್ಜುನ ಯುವ ಶಕ್ತಿ ಬಳಗ (ರಿ.)
ರಾಜ್ಯ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ದಲಿತ ಮಹಾಸಭಾ.



**ಬಿತ್ತನೆಗಾಗಿ** ಮುಂಗಾರು ಪೂರ್ವ ಮಳೆ ಉತ್ತಮವಾಗಿದ್ದು, ಈ ಬಾರಿಯ ಮುಂಗಾರು ಮಳೆಯೂ ಉತ್ತಮವಾಗಿ ಬೀಳುವ ನಿರೀಕ್ಷೆಯಲ್ಲಿರುವ ರೈತ ಬಿತ್ತನೆಗೆ ಅಣಿಯಾಗುತ್ತಿದ್ದಾನೆ. ಈ ಹಿನ್ನೆಲೆಯಲ್ಲಿ ದಾವಣಗೆರೆಯಲ್ಲಿ ಬಿತ್ತನೆ ಬೀಜ, ಗೊಬ್ಬರ ಖರೀದಿಸಿ ಹೊತ್ತೊಯ್ಯುತ್ತಿರುವ ರೈತರು

# ಹಲವು ರಾಜ್ಯಗಳಲ್ಲಿ ನಿರ್ಬಂಧಗಳು ಸಡಿಲ

ನವದೆಹಲಿ, ಜೂ. 6 – ಕೊರೊನಾ ಪರಿಸ್ಥಿತಿ ಸುಧಾರಿಸುತ್ತಿರುವಂತೆಯೇ ಮಹಾರಾಷ್ಟ್ರ ಸೇರಿದಂತೆ ಹಲವಾರು ರಾಜ್ಯಗಳು ಸೋಮವಾರದಿಂದ ಕೊರೊನಾದ ನಿರ್ಬಂಧಗಳನ್ನು ಸಡಿಲಿಸುವ ಪ್ರಕ್ರಿಯೆ ಆರಂಭಿಸಿವೆ.

ಮಹಾರಾಷ್ಟ್ರವು ಐದು ಹಂತಗಳಲ್ಲಿ ಆರ್ಥಿಕತೆಯನ್ನು ತೆರವುಗೊಳಿಸುವ ಮಾರ್ಗ ಸೂಚಿ ಹೊಂದಿದೆ. ಪಾಸಿಟಿವ್ ದರ ಹಾಗೂ ಆಕ್ಸಿಜನ್ ಬೆಡ್‌ಗಳ ಲಭ್ಯತೆ ಆಧರಿಸಿ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ರಾಜ್ಯಸರ್ಕಾರ ತಿಳಿಸಿದೆ.

ಮುಂಬೈನಲ್ಲಿ ಸಾರ್ವಜನಿಕ ಸ್ಥಳಗಳು, ರೆಸ್ಟೋರೆಂಟ್ ಹಾಗೂ ದಿನಬಳಕೆಯಲ್ಲದ ವಸ್ತುಗಳ ಮಾರುವ ಅಂಗಡಿಗಳು ಸೋಮವಾರದಿಂದ ತೆರೆಯಲಿವೆ.

ರಾಜಧಾನಿ ದೆಹಲಿಯಲ್ಲಿ ಶೇ.50ರ ಸಾಮರ್ಥ್ಯದೊಂದಿಗೆ ಮೆಟ್ರೋ ರೈಲಿನ ಸಂಚಾರಕ್ಕೆ ಅನುಮತಿ ನೀಡಲಾಗಿದೆ. ಮಾರುಕಟ್ಟೆಗಳು ಹಾಗೂ ಮಾಲ್‌ಗಳು ದಿನ ಬಿಟ್ಟು ದಿನ ತೆರೆಯಲಿವೆ.

ಉತ್ತರ ಪ್ರದೇಶ ಸರ್ಕಾರ ಕೊರೊನಾ ಕರ್ಫ್ಯೂ ಅನ್ನು ನಾಲ್ಕು ಜಿಲ್ಲೆಗಳಲ್ಲಿ ತೆರವುಗೊಳಿಸಿದೆ. ರಾಜ್ಯದ ಒಟ್ಟು 71 ಜಿಲ್ಲೆಗಳಲ್ಲಿ ಇದುವರೆಗೂ ನಿರ್ಬಂಧಗಳನ್ನು ಸಡಿಲಿಸಲಾಗಿದೆ.

ಹರಿಯಾಣ ಸರ್ಕಾರ ಲಾಕ್‌ಡೌನ್ ಅನ್ನು ಜೂನ್ 14ರವರೆಗೆ ವಿಸ್ತರಿಸಿದೆಯಾದರೂ, ಅಂಗಡಿ ಮತ್ತು ಶಾಪಿಂಗ್ ಮಾಲ್ ತೆರೆಯಲು ಮತ್ತು ಧಾರ್ಮಿಕ ಸ್ಥಳಗಳನ್ನು ತೆರೆಯಲು ಅನುಮತಿ ನೀಡಿದೆ.

ತಮಿಳುನಾಡು ಮುಖ್ಯಮಂತ್ರಿ ಎ.ಕೆ. ಸ್ಟಾಲಿನ್ ಅವರು, ಕೊರೊನಾ ಹೆಚ್ಚಾಗಿರುವ 11 ಜಿಲ್ಲೆಗಳನ್ನು ಹೊರತು ಪಡಿಸಿ ಉಳಿದೆಡೆ ಕೆಲ ನಿರ್ಬಂಧಗಳನ್ನು ಸಡಿಲಿಸಿದ್ದಾರೆ. ಲಡಾಖ್ ಸಹ ಹಂತ ಹಂತವಾಗಿ ಕೊರೊನಾ ಕರ್ಫ್ಯೂ ತೆರವುಗೊಳಿಸುವುದಾಗಿ ತಿಳಿಸಿದೆ.

# ಸಿದ್ಧಗಂಗಾ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಿಂದ ಆಮ್ಲಜನಕ ಸಾಂದ್ರಕಗಳು ಸೇವೆಗೆ ಸಮರ್ಪಣೆ



**ಕೋವಿಡ್ ಸಂದಿಗ್ಧ ಪರಿಸ್ಥಿತಿ ಸಮರ್ಥವಾಗಿ ಎದುರಿಸಲು ಪ್ರಾಮಾಣಿಕ ಪ್ರಯತ್ನ**
**– ಮಹಾಂತೇಶ ಬೀಳಗಿ, ಜಿಲ್ಲಾಧಿಕಾರಿ**

ದಾವಣಗೆರೆ, ಜೂ.6- ಕೋವಿಡ್ ಸಂದಿಗ್ಧ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಜಿಲ್ಲಾಡಳಿತ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.

ನಗರದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಆವರಣದಲ್ಲಿ ಇಂದು ಏರ್ಪಾಡಾಗಿದ್ದ ಶಾಲೆಯ ಹಿರಿಯ ವಿದ್ಯಾರ್ಥಿಗಳು ಮತ್ತು ಅವರ ಸ್ನೇಹಿತರ ಸಹಾಯಾರ್ಥದಲ್ಲಿ 5 ಲಕ್ಷ ರೂ. ವೆಚ್ಚದ ಹತ್ತು ಆಮ್ಲಜನಕ ಸಾಂದ್ರಕಗಳನ್ನು (ಆಕ್ಸಿಜನ್ ಕಾನ್ಸಂಟ್ರೇಟರ್‌ಗಳು) ಕೊರೊನಾ ಸೋಂಕಿತರ ಸೇವೆಗೆ ಲೋಕಾರ್ಪಣೆ ಮಾಡಿ ಮಾತನಾಡಿದರು.

ಕೊರೊನಾ ಮೊದಲನೇ ಅಲೆ ಎದುರಾದ ಸಂದರ್ಭದಲ್ಲೂ ಕೂಡ ಸಿದ್ಧಗಂಗಾ ವಿದ್ಯಾಸಂಸ್ಥೆ ಸಂಕಷ್ಟಕ್ಕೀಡಾದವರಿಗೆ ಆಹಾರ ಧಾನ್ಯ ಕಿಟ್ ವಿತರಿಸಿ ಮಾನವೀಯತೆ ಮೆರೆದಿತ್ತು. ಸಂಸ್ಥೆಯ ಮುಖ್ಯಸ್ಥರಾದ ಜಸ್ಟಿನ್ ಡಿಸೌಜ ಹಾಗೂ ಹೇಮಂತ್, ಡಾ. ಜಯಂತ್ ಸೇವಾ ಮನೋಭಾವನೆ ಸ್ಮರಣೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದಾವಣಗೆರೆ ಜಿಲ್ಲೆಯಲ್ಲಿರುವಷ್ಟು ಹೃದಯ ವೈಶಾಲ್ಯತೆ ಹೊಂದಿದ ಜನರನ್ನು ಬೇರೆ ಯಾವ ಜಿಲ್ಲೆಯಲ್ಲೂ ಕಾಣಲು ಸಾಧ್ಯವಿಲ್ಲ ಎಂದು ಅಭಿಮಾನ ಪೂರ್ವಕವಾಗಿ ನುಡಿದರು.

ಆಸ್ಪತ್ರೆಯಿಂದ ಬಿಡುಗಡೆಯಾದ ಕೊರೊನಾ ಪೀಡಿತರಿಗೆ ಕೆಲವು ಸಂದರ್ಭದಲ್ಲಿ ಮನೆಯಲ್ಲಿಯೇ ಬಳಸಲು ಆಕ್ಸಿಜನ್ ಕಾನ್ಸಂಟ್ರೇಟರ್‌ಗಳ ಅಗತ್ಯವಿರುತ್ತದೆ. ಆದರೆ ಉಳ್ಳವರು ವೆಚ್ಚ ಭರಿಸಿ ಕೊಳ್ಳುತ್ತಾರೆ. ಬಡವರು, ಮಧ್ಯಮ ವರ್ಗದ ಜನರಿಗೆ ಕಷ್ಟಸಾಧ್ಯ. ಇಂತಹ ಸಂದರ್ಭದಲ್ಲಿ ಉಚಿತವಾಗಿ ಸಿದ್ಧಗಂಗಾ ಸಂಸ್ಥೆಯಂತಹ ದಾನಿಗಳು ನೀಡುವ ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ಪಡೆಯಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಮಹಾನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಮಾತನಾಡಿ, ಕೋವಿಡ್‌ನಂತಹ ವಿಷಮ ಪರಿಸ್ಥಿತಿಯಲ್ಲಿ ಬಹುಪಾಲು ಜನರು ಕೊರೊನಾ ಮಹಾಮಾರಿ ವಿರುದ್ಧದ ಸಮರದಲ್ಲಿ ಸಾಮಾಜಿಕ ಹೊಣೆಗಾರಿಕೆ ಅರಿತು ಹೋರಾಟ ನಡೆಸುತ್ತಿದ್ದಾರೆ ಎಂದರು.

ಸಿದ್ಧಗಂಗಾ ಪದವಿ ಪೂರ್ವ ಕಾಲೇಜಿನ ನಿರ್ದೇಶಕ ಡಾ. ಡಿ.ಎಸ್. ಜಯಂತ್ ಮಾತನಾಡಿ, ತಮ್ಮ ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳು ಅಮೆರಿಕಾ, ನ್ಯೂ ಜರ್ಸಿ, ಬೆಂಗಳೂರು ಮತ್ತಿತರೆ ಕಡೆಗಳಲ್ಲಿ ಉನ್ನತ ಹುದ್ದೆಗಳಲ್ಲಿದ್ದಾರೆ. ಅವರು ನೀಡಿದ ಧನ ಸಹಾಯದಿಂದ ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ಖರೀದಿಸಿ ಕೊರೊನಾ ಪೀಡಿತರ ರಕ್ಷಣೆಗೆ ನೀಡಲಾಗುತ್ತದೆ ಎಂದು ತಿಳಿಸಿದರು.

ಸಿದ್ಧಗಂಗಾ ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಜಸ್ಟಿನ್ ಡಿಸೌಜಾ, ಹೇಮಂತ್, ಪ್ರಶಾಂತ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ರಾಜ್ಯದಲ್ಲಿ 12,209 ಸೋಂಕಿತರು

ಬೆಂಗಳೂರು, ಜೂ. 6 – ರಾಜ್ಯದಲ್ಲಿ ಭಾನುವಾರ 12,209 ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ಇದೇ ದಿನ 320 ಜನ ಸಾವನ್ನಪ್ಪಿದ್ದಾರೆ. 25,659 ಜನರು ಕೊರೊನಾದಿಂದ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ.

ಹೊಸ ಸೋಂಕಿತರಲ್ಲಿ ಬೆಂಗಳೂರು ನಗರ ಜಿಲ್ಲೆಗೆ ಸೇರಿದವರು 2,944 ಜನರಾಗಿದ್ದಾರೆ. ಜಿಲ್ಲೆಯಲ್ಲಿ 10,224 ಜನರು ಬಿಡುಗಡೆಯಾಗಿದ್ದರೆ, 187 ಜನ ಸಾವನ್ನಪ್ಪಿದ್ದಾರೆ.

# ಜಗಳೂರಿನ ಕೋವಿಡ್ ಸೆಂಟರ್‌ಗೆ ನ್ಯಾಯಾಧೀಶರ ಭೇಟಿ, ಪರಿಶೀಲನೆ



ಜಗಳೂರು, ಜೂ. 6- ತಾಲ್ಲೂಕಿನಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಅದರಲ್ಲೂ ಗ್ರಾಮೀಣ ಭಾಗದಲ್ಲಿ ಅತಿ ವೇಗವಾಗಿ ಸೋಂಕು ಹಬ್ಬುತ್ತಿದೆ. ಆದ್ದರಿಂದ ಸಾರ್ವಜನಿಕರು ಜಾಗೃತರಾಗಿ ಇರಬೇಕು ಎಂದು ಜೆ.ಎಮ್.ಎಫ್.ಸಿ ಸಿವಿಲ್ ನ್ಯಾಯಾಧೀಶರಾದ ಜಿ. ತಿಮ್ಮಯ್ಯ ತಿಳಿಸಿದರು.

ತಾಲ್ಲೂಕಿನ ಮೆದಗಿನಕೆರೆ ಹತ್ತಿರವಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕೋವಿಡ್ ಕೇರ್ ಸೆಂಟರ್‌ಗೆ ಇಂದು ಭೇಟಿ ಮಾಡಿ, ಕೊರೋನಾ ಸೋಂಕಿತರ ಯೋಗ ಕ್ಷೇಮ ವಿಚಾರಿಸಿದ ನಂತರ ಅವರು ಶಾಲಾ ಆವರಣದಲ್ಲಿ ಸಸಿ ನೆಟ್ಟು ಪತ್ರಕರ್ತರೊಂದಿಗೆ ಮಾತನಾಡಿದರು.

ಅನಾವಶ್ಯಕವಾಗಿ ಯಾರು ರಸ್ತೆಗಿಳಿದು ತಿರುಗಬಾರದು. ಮುಖಕ್ಕೆ ಮಾಸ್ಕ್ ಹಾಕಿಕೊಳ್ಳಬೇಕು. ತಮ್ಮ ಕೈಗಳನ್ನು ಸ್ಯಾನಿಟೈಸರ್ ಮತ್ತು ಸಾಬೂನುಗಳಿಂದ ತೊಳೆದುಕೊಳ್ಳಬೇಕು. ಕೆಮ್ಮು, ಜ್ವರ, ನೆಗಡಿಯಂತಹ ಲಕ್ಷಣಗಳು ಕಂಡು ಬಂದಲ್ಲಿ ತಕ್ಷಣವೇ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ವೈದ್ಯರ ಸಲಹೆ ಪಡೆಯಬೇಕು ಎಂದು ಹೇಳಿದರು.

ಕೋವಿಡ್ ಕೇರ್ ಸೆಂಟರ್‌ನಲ್ಲಿ ನಿಮಗೆ ಊಟ, ತಿಂಡಿ ಮತ್ತು ಶುದ್ಧ ಕುಡಿಯುವ ನೀರು ಕೊಡಲಾಗುತ್ತಿದೆಯೇ ? ಎಂದು ಕೇಳಿದಾಗ, ಸೋಂಕಿತರು ಸ್ವಾಮಿ ನಮಗೆ ಇಲ್ಲಿ ಎಲ್ಲಾ ಸೌಲಭ್ಯಗಳು ದೊರೆಯುತ್ತಿದ್ದು, ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ ಎಂದು ಸೋಂಕಿತರು ಉತ್ತರಿಸಿದರು.

ಕೋವಿಡ್ ಕೇರ್ ಸೆಂಟರ್ ಸಹಾಯಕ ನೋಡಲ್ ಅಧಿಕಾರಿ ಬಿ.ಮಹೇಶ್ವರಪ್ಪ ಅವರಿಗೆ ಎಲ್ಲರಿಗೂ ಸಮಯಕ್ಕೆ ಸರಿಯಾಗಿ ಔಷಧಿ ಮತ್ತು ಮಾತ್ರೆಗಳನ್ನು ಕೊಡಿ. ಇಲ್ಲಿನ ಪರಿಸರ ತುಂಬಾ ಚೆನ್ನಾಗಿದೆ. ಬೆಳಿಗ್ಗೆ ಎದ್ದ ತಕ್ಷಣ ವಾಕ್ ಮತ್ತು ಯೋಗ -ಧ್ಯಾನ ಕಡ್ಡಾಯವಾಗಿ ಮಾಡಿಸುವಂತೆ ನಿರ್ದೇಶಿಸಿದರು.

ತಾಲ್ಲೂಕು ಆರೋಗ್ಯಧಿಕಾರಿ ಡಾ. ನಾಗರಾಜ್, ಶಾಲೆಯ ಪ್ರಾಂಶುಪಾಲರಾದ ರೂಪಕಲಾ ಇತರರು ಉಪಸ್ಥಿತರಿದ್ದರು.

# ಪ್ರಕೃತಿಯನ್ನು ಪೋಷಿಸಿದ್ದಲ್ಲಿ ನಮ್ಮ ಬದುಕು ಹಸಿರು




**ಕರ್ನಾಟಕ ಲೇಖಕಿಯರ ಸಂಘದ ಜಿಲ್ಲಾ ಘಟಕದ ಅಂತರ್ಜಾಲ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಹಿರಿಯ ಲೇಖಕಿ ವನಮಾಲ ಸಂಪನ್ನಕುಮಾರ್ ಪ್ರತಿಪಾದನೆ**

ದಾವಣಗೆರೆ, ಜೂ. 7 - ಗಿಡ - ಮರಗಳನ್ನು ಬೆಳೆಸುವುದರೊಂದಿಗೆ ಹಸಿರನ್ನು ರಕ್ಷಣೆ ಮಾಡಿದ್ದಲ್ಲಿ ನಮ್ಮ ಬದುಕು ಹಸನಾಗುತ್ತದೆ ಎಂದು ಕರ್ನಾಟಕ ಲೇಖಕಿಯರ ಸಂಘದ ರಾಜ್ಯಾಧ್ಯಕ್ಷರಾದ ಶ್ರೀಮತಿ ವನಮಾಲಾ ಸಂಪನ್ನ ಕುಮಾರ್ ಪ್ರತಿಪಾದಿಸಿದರು.

ಕರ್ನಾಟಕ ಲೇಖಕಿಯರ ಸಂಘದ ಜಿಲ್ಲಾ ಶಾಖೆಯಿಂದ ಇಂದು ಹಮ್ಮಿಕೊಂಡಿದ್ದ ಅಂತರ್ಜಾಲ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಕೃತಿಯನ್ನು ಪೋಷಿಸಿದ್ದಲ್ಲಿ ನಮ್ಮ ಬದುಕು ಖಂಡಿತಾ ಹಸಿರಾಗುತ್ತದೆ. ಮುಂದಿನ ಪೀಳಿಗೆಗೆ ಪ್ರಕೃತಿಯನ್ನು ಉಳಿಸಬೇಕಾದದ್ದು ನಮ್ಮ ಕರ್ತವ್ಯ ಎಂದು ಹೇಳಿದರು ಅವರು, ಕೊರೊನಾದಂತಹ ಲಾಕ್‌ಡೌನ್ ಸಂದರ್ಭದಲ್ಲಿ ಸಂಘದ ಜಿಲ್ಲಾ ಘಟಕದ ಸದಸ್ಯೆಯರು ಪರಿಸರ ದಿನಾಚರಣೆಯನ್ನು ವಿಭಿನ್ನವಾಗಿ ಆಚರಿಸುತ್ತಿರುವುದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಘದ ಜಿಲ್ಲಾ ಅಧ್ಯಕ್ಷರಾದ ಶ್ರೀಮತಿ ವೀಣಾ ಕೃಷ್ಣಮೂರ್ತಿ, ಕವಿಯ ಮನದಲ್ಲಿ ಗಾನದಲೆಯು ಇರುತ್ತದೆ.ಆ ಅಲೆಗೆ ನಮ್ಮ ರಾಗದಲ್ಲೇ ಜೀವ ತುಂಬಬೇಕು, ನಮ್ಮ ಕವಿಗಳಲ್ಲಿ ಇರುವ ಗಾನ ಸೆಲೆ ಹೊರ ತರಬೇಕೆನ್ನುವ ಸಲುವಾಗಿ ನಿಮ್ಮ ಸಾಹಿತ್ಯ ರಚನೆಯನ್ನು ನೀವೇ ಹಾಡಬೇಕು, ಪ್ರಯತ್ನ ಪಡಿ ಎಂದು ತಿಳಿಸಿದರು.

ವನಿತಾ ಸಾಹಿತ್ಯ ವೇದಿಕೆ ಅಧ್ಯಕ್ಷರಾದ ಶ್ರೀಮತಿ ಮಲ್ಲಮ್ಮ ನಾಗರಾಜ್ ತಮ್ಮ ಆಶಯ ನುಡಿಯಲ್ಲಿ, ಸಾವಿರಾರು ಮರಗಳನ್ನು ಪೋಷಿಸಿ, ಇಂದಿನ ಪೀಳಿಗೆಗೆ ಮಾದರಿಯಾದ ಸಾಲುಮರದ ತಿಮ್ಮಕ್ಕನವರ ಸೇವೆಯನ್ನು ಮೆಲುಕು ಹಾಕಿ, ಅಭಿನಂದಿಸಿದರು.

'ಕಡಿದರೆ ಮರ ಬರುವುದು ಬರ' ಎಂಬ ನುಡಿಯಂತೆ ಎಲ್ಲೆಡೆ ಗಿಡ - ಮರಗಳನ್ನು ಕಡಿಯುವುದನ್ನು ನಿಲ್ಲಿಸಬೇಕು. ಪರಿಸರ ಸಂರಕ್ಷಣೆಯಲ್ಲಿ ಮಹಿಳೆಯರ ಕೊಡುಗೆ ಅಪಾರ. ಗೃಹಿಣಿಯರು ಕುಟುಂಬದ ಸ್ವಾಸ್ಥ್ಯ ಕಾಪಾಡುವಲ್ಲಿ ಹೆಚ್ಚು ಗಮನ ನೀಡಬೇಕು ಎಂದು ಮಲ್ಲಮ್ಮ ಕರೆ ನೀಡಿದರು.

ಕಲೇಸಂನ ಕಾರ್ಯದರ್ಶಿ ಶ್ರೀಮತಿ ಕುಸುಮಾ ಲೋಕೇಶ್ 'ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ' ಎನ್ನುವ ಶೀರ್ಷಿಕೆಯಡಿ ವಿಷಯ ಮಂಡನೆ ಮಾಡುವುದರೊಂದಿಗೆ ಪ್ರಕೃತಿಯೇ ದೇವರು. ಸ್ವಚ್ಛ, ಸುಂದರ ಪರಿಸರವನ್ನು ನಿರ್ಮಿಸುವುದು ಪ್ರತಿಯೊಬ್ಬರ ಹೊಣೆ ಎನ್ನುವುದನ್ನು ಅತ್ಯಂತ ಅರ್ಥಪೂರ್ಣವಾಗಿ ವಿವರಿಸಿದರು. ಪ್ರಕೃತಿಯನ್ನು ದೇವರೆಂದು ಪೂಜಿಸುತ್ತೇವೆ. ಅಂತಹ ದೈವತ್ವದ ವಿನಾಶ ಮಾಡಿದ್ದಲ್ಲಿ ಮಾನವನ ನಾಶವು ಇದೆ ಎಂದು ಹೇಳಿದರು.

'ಮಹಿಳೆ ಮತ್ತು ಪರಿಸರ' ವಿಷಯ ಕುರಿತು ಉಪನ್ಯಾಸ ನೀಡಿದ ಎ.ವಿ.ಕೆ ಮಹಿಳಾ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ. ಗೀತಾ ಬಸವರಾಜ್ ಅವರು, ವೃಕ್ಷದ ಫಲ ವೃಕ್ಷಕ್ಕಲ್ಲ, ನದಿಯ ನೀರು ನದಿಗಲ್ಲ, ಶರಣರ, ಸಂತರ, ದಾರ್ಶನಿಕರ ಬದುಕು ಸ್ವಾರ್ಥಕ್ಕಲ್ಲ ಎನ್ನುವ ನುಡಿಯಂತೆ ಮನುಕುಲದಲ್ಲಿ ವಿಶೇಷವಾಗಿ ಮಹಿಳೆ ಎಂದರೆ ಅದೊಂದು ಶಕ್ತಿ. ಸ್ಫೂರ್ತಿಯ ಸೆಲೆ, ಜೀವಕಾರುಣ್ಯದ ನೆಲೆಯಾಗಿರುವ ಅವಳು ಅಂತಃಕರಣ, ಮಾನವೀಯ ಸಂವೇದನೆ, ನಿಸ್ವಾರ್ಥ ಭಾವನೆಯನ್ನು ಒಳಗೊಂಡಿದ್ದು, ಮೊಟ್ಟ ಮೊದಲ ಕೃಷಿ ಸಂಶೋಧಕಿಯಾಗಿ ಹೊರಹೊಮ್ಮಿದ್ದಾಳೆ ಎಂದು ತಿಳಿಸಿದರು.

ವನಿತಾ ಸಾಹಿತ್ಯ ವೇದಿಕೆಯ ಉಪಾಧ್ಯಕ್ಷರಾದ ಶ್ರೀಮತಿ ಅರುಂಧತಿ ರಮೇಶ್ ಅವರು ಕವಿತೆಗಳ ಕುರಿತು ವಿಶ್ಲೇಷಣೆ ಮಾಡಿದರು. ಪರಿಸರ ಜೈವಿಕ ಸರಪಳಿಯ ಒಂದು ಕೊಂಡಿ. ಜೀವ ಜಾಲದ ಎಳೆಯೂ ಆಗಿ ಸ್ಥಿತಿ, ಸ್ಥಳ ಮತ್ತು ಕಾಲದ ಅವಲಂಬನೆಯ ಮಾದರಿಯಾಗಿ ಮಾನವ ಜೀವಿ ಪ್ರಕೃತಿಯಲ್ಲಿ ಅಸ್ತಿತ್ವ ಗಳಿಸಿದ್ದಾನೆ. ಅದನ್ನು ಆಳುವ ಭ್ರಮೆಯಲ್ಲಿ ಮನುಷ್ಯ ತನ್ನನ್ನೇ ಸ್ವತಃ ಸಮಸ್ಯೆಗಳ ಹುತ್ತವಾಗಿಸಿಕೊಂಡಿದ್ದಾನೆ. ಜೀವದ ರಕ್ಷಣೆಗೆ ಪ್ರಕೃತಿಯನ್ನು ಪೋಷಿಸುವಂತಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಶ್ರೀಮತಿ ಗಿರಿಜಾ ಸಿದ್ಧಲಿಂಗಪ್ಪ ಅವರ ಪ್ರಾರ್ಥನೆ ನಂತರ ಶ್ರೀಮತಿ ಸುಭಾಷಿಣಿ ಮಂಜುನಾಥ್ ಸ್ವಾಗತಿಸಿದರು. ಕಲೇಸಂ ಕಾರ್ಯದರ್ಶಿ ಶ್ರೀಮತಿ ಸತ್ಯಭಾಮ ಮಂಜುನಾಥ್ ವಂದಿಸಿದರು.

ಶಿಕ್ಷಕಿ, ಸಾಹಿತಿ ಶ್ರೀಮತಿ ಐ.ಕೆ.ಉಮಾದೇವಿ ಪರಿಸರ ಗೀತೆಯನ್ನು ಪ್ರಸ್ತುತ ಪಡಿಸಿದರು.

## ದೂಡಾ ಮಾಜಿ ಅಧ್ಯಕ್ಷ ಶೌಕತ್ ಅಲಿ ನಿಧನಕ್ಕೆ ಎಸ್ಸೆಸ್, ಎಸ್ಸೆಸ್ಸೆಂ ಸಂತಾಪ

ದಾವಣಗೆರೆ, ಜೂ.6- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶೌಕತ್ ಅಲಿ ಪೈಲ್ವಾನ್ ನಿಧನಕ್ಕೆ ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್ ಸಂತಾಪ ವ್ಯಕ್ತಪಡಿಸಿದ್ದಾರೆ.

## ಬೀದಿ ನಾಯಿ ದಾಳಿ : ಬಾಲಕಿಗೆ ಗಂಭೀರ ಗಾಯ

ದಾವಣಗೆರೆ, ಜೂ.6- ಮನೆಯಂಗಳದಲ್ಲಿದ್ದ ಬಾಲಕಿ ಮೇಲೆ ಬೀದಿ ನಾಯಿಗಳು ದಾಳಿ ನಡೆಸಿರುವ ಘಟನೆ ಇಲ್ಲಿನ ಆಜಾದ್‌ನಗರ ಇಂದು ನಡೆದಿದೆ.

ತಂದೆ ಸಲಾಮ್, ತಾಯಿ ತಬಸುಮ್ ಬಾನು ಅವರ ಮಗಳಾದ ಕನಿಷ್ ಫಾತಿಮಾ (4) ನಾಯಿಯ ದಾಳಿಗೆ ತುತ್ತಾದ ಬಾಲಕಿ. ಈ ಬಾಲಕಿಯ ಸ್ಥಿತಿ ಗಂಭೀರವಾಗಿದ್ದು, ಬಾಪೂಜಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಮಗುವಿಗೆ ನಾಯಿಗಳು ದಾಳಿ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳೀಯ ನಿವಾಸಿಗಳು ಪ್ರತಿಭಟನೆ ನಡೆಸಿದರು.

ನಾಯಿಗಳ ದಾಳಿಗೆ ತುತ್ತಾದ ಬಾಲಕಿ ಮತ್ತು ಆಕೆಯ ಪೋಷಕರನ್ನು ಮೇಯರ್ ಎಸ್.ಟಿ. ವೀರೇಶ್ ಆಸ್ಪತ್ರೆಯಲ್ಲಿ ಭೇಟಿ ಮಾಡಿ ಸಾಂತ್ವನ ಹೇಳಿದರು.

ಪಾಲಿಕೆ ಸದಸ್ಯರಾದ ಜಾಕೀರ್, ಶಫೀಕ್ ಪಂಡಿತ್, ಕಬೀರ್ ಅವರುಗಳ ಜೊತೆ ಸೇರಿ ಆಸ್ಪತ್ರೆ ವೆಚ್ಚಕ್ಕೆ ಹಣ ನೀಡಿದರು. ಹೆಚ್ಚಿನ ವೆಚ್ಚವನ್ನು ಪಾಲಿಕೆಯಿಂದ ನೀಡಲಾಗುವುದು ಎಂದು ಭರವಸೆ ನೀಡಿದರು.

# ಹರಿಹರದ ತಹಶೀಲ್ದಾರ್, ವೈದ್ಯರು, ಸಿಬ್ಬಂದಿಗಳಿಗೆ ಸೋಂಕು



ಹರಿಹರ, ಜೂ.6- ತಾಲ್ಲೂಕಿನಲ್ಲಿ ಕೊರೊನಾ ಸೋಂಕು ಹೆಚ್ಚಾಗುತ್ತಿದ್ದು, ತಹಶೀಲ್ದಾರ್ ಸೇರಿದಂತೆ ವೈದ್ಯರು, ಸಿಬ್ಬಂದಿಗಳಿಗೆ ಕೊರೊನಾ ಸೋಂಕು ದೃಢಪಟ್ಟಿದ್ದು, ಜನರು ಆತಂಕದಿಂದ ಜೀವನ ನಡೆಸುತ್ತಿದ್ದಾರೆ.

ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಸಾರ್ವಜನಿಕ ಆಸ್ಪತ್ರೆಯ ಪ್ರಸೂತಿ ವೈದ್ಯರಾದ ಡಾ. ಸವಿತಾ, ಡಾ. ನಾಗವೇಣಿ, ಡಾ. ರಾಜಪ್ಪ, ಡಾ. ಪ್ರತಾಪ್ ಬೆಳ್ಳೂಡಿ, ಡಾ. ಶಿಲ್ಪ ಕೊಂಡಜ್ಜಿ, ಡಾ. ಶಶಿಕಲಾ ಅವರಿಗೆ ಕೊರೊನಾ ಸೋಂಕು ದೃಢಪಟ್ಟಿರುವುದರಿಂದ ರೋಗಿಗಳಿಗೆ ಚಿಕಿತ್ಸೆ ನೀಡುವುದು ಹೇಗೆ ಎಂಬುದು ಆರೋಗ್ಯ ಇಲಾಖೆಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ.

ತಾಲ್ಲೂಕಿನಲ್ಲಿ ಇಂದು 36 ಕೊರೊನಾ ಪ್ರಕರಣಗಳು ದೃಢಪಟ್ಟಿದ್ದು, ಹೋಂ ಐಸೋಲೇಷನ್‌ನಲ್ಲಿ 83 ಮತ್ತು ಕೋವಿಡ್ ಕೇರ್ ಸೆಂಟರ್‌ನಲ್ಲಿ 214 ಜನರು ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಡಾ. ಚಂದ್ರಮೋಹನ್ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆ ಎಂ. ಉಮ್ಮಣ್ಣ, ಪಾಟೀಲ್ ಇತರರು ಹಾಜರಿದ್ದರು.

## 143 ಪಾಸಿಟಿವ್, 6 ಸಾವು, 398 ಗುಣಮುಖ

ದಾವಣಗೆರೆ, ಜೂ.6- ಜಿಲ್ಲೆಯಲ್ಲಿ ಭಾನುವಾರ 143 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ಆರು ಜನರು ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ. 398 ಜನರು ಗುಣಮುಖರಾಗಿದ್ದಾರೆ ಎಂದು ಜಿಲ್ಲಾಡಳಿತದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 50, ಹರಿಹರ 13, ಜಗಳೂರು 6, ಚನ್ನಗಿರಿ 30, ಹೊನ್ನಾಳಿ 40 ಹಾಗೂ ಹೊರ ಜಿಲ್ಲೆಯ ನಾಲ್ವರಲ್ಲಿ ಸೋಂಕು ಕಾಣಿಸಿಕೊಂಡಿದೆ.

ಹೊನ್ನಾಳಿ ತಾಲ್ಲೂಕು ಸಾಗರಪೇಟೆಯ 50 ವರ್ಷದ ಮಹಿಳೆ, ದಾನಿಹಳ್ಳಿಯ 80 ವರ್ಷದ ಮಹಿಳೆ, ಅರಳೀಪುರದ 64ರ ಮಹಿಳೆ, ನೂರಾನಿ ಮಸ್ಜಿದ್‌ನ 55 ವರ್ಷದ ಮಹಿಳೆ, ಹೊನ್ನಾಳಿ ಪಟ್ಟಣದ 47 ವರ್ಷದ ಪುರುಷ, ಮಠದ ರಸ್ತೆಯ 75 ವರ್ಷದ ಪುರುಷ ಇವರು ಸೋಂಕಿನಿಂದ ಮೃತಪಟ್ಟಿದ್ದಾರೆ.

ಜಿಲ್ಲೆಯಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 3877 ಇದ್ದು, ಇಲ್ಲಿಯವರೆಗೆ 391 ಜನರು ಮೃತಪಟ್ಟಿದ್ದಾರೆ.

## ಪೆಟ್ರೋಲ್ ಬೆಲೆ ಮತ್ತಷ್ಟು ಹೆಚ್ಚಳ

ನವದಹೆಲಿ, ಜೂ.6 - ಭಾನುವಾರ ಪೆಟ್ರೋಲ್, ಡೀಸೆಲ್ ಬೆಲೆ ಯನ್ನು ಮತ್ತೆ ಹೆಚ್ಚಿಸಲಾಗಿದ್ದು, 6 ರಾಜ್ಯಗಳಲ್ಲಿ ತೈಲ ಬೆಲೆ 100 ರೂ.ಗಳ ಗಡಿ ದಾಟಿದೆ. ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 21 ಪೈಸೆ, ಡೀಸೆಲ್ ಬೆಲೆ ಯನ್ನು 20 ಪೈಸೆ ಹೆಚ್ಚಿಸಲಾಗಿದೆ ಎಂದು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ತಿಳಿಸಿವೆ. ಮೇ 4ರ ನಂತರ 20ನೇ ಬಾರಿ ತೈಲ ಬೆಲೆ ಹೆಚ್ಚಿಸಲಾಗಿದೆ. ರಾಜಸ್ಥಾನ, ಮಧ್ಯ ಪ್ರದೇಶ, ಮಹಾರಾಷ್ಟ್ರ, ಆಂಧ್ರ ಪ್ರದೇಶ, ತೆಲಂಗಾಣ ಹಾಗೂ ಲಡಾಖ್‌ಗಳಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 100 ರೂ.ಗಳ ಗಡಿದಾಟಿದೆ.


## ಕೈಲಾಸ ಸಮಾರಾಧನೆ

ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು **ಹಾಲೇಕಲ್** ಗ್ರಾಮದ ವಾಸಿ **ಶ್ರೀಮತಿ ತಳವಾರ ಹನುಮಕ್ಕ** ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 26.05.2021 ನೇ ಬುಧವಾರ ಬೆಳಿಗ್ಗೆ 10.30 ಗಂಟೆಗೆ ನನ್ನ ಪೂಜ್ಯ ಪತಿಯವರಾದ **ಶ್ರೀ ತಳವಾರ ಮೂಡ್ಲ್ಯಪ್ಪನವರು** ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ



ಜನನ : 01.01.1970 ನಿಧನ : 26.05.2021

**'ಕೈಲಾಸ ಸಮಾರಾಧನೆ'ಯನ್ನು** ದಿನಾಂಕ 07.06.2021ನೇ ಸೋಮವಾರ ಬೆಳಿಗ್ಗೆ 10.30 ಗಂಟೆಗೆ ಹಾಲೇಕಲ್ ಗ್ರಾಮದ ಸ್ವಗೃಹದಲ್ಲಿ ನೆರವೇರಿಸಲಾಗುವುದು. ತಾವುಗಳು ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ತಮ್ಮಲ್ಲಿ ಪ್ರಾರ್ಥನೆ.

ಇಂತಿ ದುಃಖತಪ್ತರು :
ಶ್ರೀಮತಿ ತಳವಾರ ಹನುಮಕ್ಕ ಮತ್ತು ಮಕ್ಕಳಾದ ಶ್ರೀಮತಿ ನೇತ್ರಾವತಿ, ಶ್ರೀ ಗೋವಿಂದ ಹಾಲೇಕಲ್ ಶ್ರೀ ಎಂ. ವಾಮದೇವಪ್ಪ, ಅಳಿಯಂದಿರಾದ ಶ್ರೀ ಚನ್ನಬಸಪ್ಪನವರು, ಸೊಸೆಯಂದಿರಾದ ಶ್ರೀಮತಿ ಅಂಜಲಿ, ಶ್ರೀಮತಿ ಅಶ್ವಿನಿ ಮತ್ತು ಮೊಮ್ಮಕ್ಕಳು, ತಳವಾರ ವಂಶಸ್ಥರು, ಹಾಲೇಕಲ್ ಹಾಗೂ ಬಂಧು-ಮಿತ್ರರು.
ವಿ.ಸೂ. : ಆಹ್ವಾನ ಪತ್ರಿಕೆ ಕಳುಹಿಸಲಾಗದೇ ಇರುವುದರಿಂದ ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರುತ್ತೇನೆ.
**ಶ್ರೀ ಗೋವಿಂದ್ ಹಾಲೇಕಲ್,** ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಜಿಲ್ಲಾಧ್ಯಕ್ಷರು







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte